Sri KADIDAL MANJAPPA.—Sir, we were under the impression that on the basis of the discision taken by the Business Advisory Committee, the discussion would be over today. But it appears that the concensus of opinion is that many members are desirous of participating. It is not necessary to have two days. I would suggest that one more day may be allotted. If we can sit from one to six continuously doing away with the question hour, it would be sufficient.

Sri J. B. MALLARADHYA.—We will sit till seven o'clock.

Sri KADIDAL MANJAPPA.—If the members are prepared to sit till seven o'clock, we may do so.

Sri J. B. MALLARADHYA.—So, may I presume that the House will take into con ideration this matter tomorrow also from 2 P.M. to 7 P.M ?

Mr. DEPUTY SPEAKER.—Yes, from 2 P.M. to 7 P.M. He may move a motion for extension.

Motion for extension of time.

Sri J. B. MALLARADHYA.—I move :

> "That the discussion on the flood situation be extended till the conclusion of the business tomorrow."

Mr. DEPUTY SPEAKER.—The question is :

> "That the discussion on the flood situation be extended till the conclusion of the business tomorrow."

The motion was adopted.

MOTION *Re* : SITUATION FLOOD—Debate (*contd.*)

†ಶ್ರೀ ಬಿ. ಎಚ್. ಬೋರಣ್ಣಗೌಡ (ಬೇಲೂರು).—ಸ್ವಾಮಿ, ಪ್ರಕೃತಿ ವಿಕೋಪಕ್ಕೆ ಸಿಕ್ಕಿ ದೇಶದ ಕೆಲವು ಭಾಗಗಳಲ್ಲಿ ಬಹಳ ಅನಾಹುತವಾಗಿದೆ ಎನ್ನತಕ್ಕ ವಿಚಾರವನ್ನು ಈ ಮಾನ್ಯ ಸಭೆಯ ಎಲ್ಲಾ ಸದಸ್ಯರು ಮನಗಂಡಿದ್ದಾರೆ. ತತ್ರಾಪಿ ಮಲೆನಾಡಿನಲ್ಲಿ ನದಿಗಳ ಪ್ರವಾಹ ಹೆಚ್ಚಿ, ನದಿಗಳ ಪಾತ್ರಕ್ಕೆ ಹತ್ತಿರವಾಗಿರತಕ್ಕ ಜಮೀನು, ಆ ಜಮೀನು ಹೊಂದಿದವರಿಗೆ ಇರತಕ್ಕ ಮನೆಮಠಗಳು ಮತ್ತು ಇತರರ ಸಾವಿರಾರು ಮನೆಗಳು ನಾಶವಾಗಿವೆ. ಅನೇಕರು ಈಗಾಗಲೇ ವಾಸಕ್ಕೆ ಮನೆಗಳು ಇಲ್ಲದೆ ಬೇರೆ ಕಡೆಗಳಲ್ಲಿ ಹೋಗಿ ವಾಸ ಮಾಡುತ್ತಿರತಕ್ಕದ್ದು ಮತ್ತೆ ಕೆಲವು ಸಂದರ್ಭಗಳಲ್ಲಿ ಸರ್ಕಾರದ ಕಟ್ಟಡಗಳನ್ನು ನಿರಾಶ್ರಿತರಾದಂತವರಿಗೆ ಅವರ ವಾಸಕ್ಕಾಗಿ ಕೊಟ್ಟಿರತಕ್ಕಂಥಾದ್ದು ಇವೆಲ್ಲವನ್ನೂ ಈಗ ನಾವೆಲ್ಲರೂ ಕಂದಾಯ ಮಂತ್ರಿಗಳ ವರದಿಯಿಂದ ಕೇಳಿದ್ದೇವೆ. ಸರ್ಕಾರದವರು ಈ ವರದಿಯಲ್ಲಿ ಅಂತಹವರಿಗೆ ಸಾಕಷ್ಟು ರಿಲೀಫನ್ನು ಯಾವಯಾವರೀತಿ ಒದಗಿಸಿದ್ದಾರೆ, ಯಾವಯಾವ ರೀತಿ ಇನ್ನೂ ಮುಂದೆ ಕೊಡಬೇಕು ಎನ್ನುವುದಕ್ಕೆ ತಕ್ಕ ಸೂಚನೆಗಳನ್ನು ಕೊಟ್ಟಿದ್ದಾರೆ ಎಂಬ ವಿಚಾರವನ್ನು ಸಹ ರೆವಿನ್ಯೂ ಮಂತ್ರಿಗಳು ಹೇಳಿದ್ದಾರೆ.

(ಶ್ರೀ ಬಿ. ಎಲ್. ಬೈರಣ್ಣಗೌಡ)

ಅಲ್ಲದೆ ತಾತ್ಕಾಲಿಕವಾಗಿ ಆ ರೀತಿ ರಿಲೀಫ್ ಕೊಡುವುದರಲ್ಲಿ ಸ್ಥಳೀಯ ಅಧಿಕಾರಿಗಳು ಅಲ್ಲಿನ ಜನತೆಯ ಕಷ್ಟನಷ್ಟಗಳ ಬಗ್ಗೆ ಎಷ್ಟು ಸಹಕರಿಸಿದ್ದಾರೆ ಎನ್ನುವ ವಿಚಾರವನ್ನು ಹೇಳಿ ಈ ಸಂದರ್ಭದಲ್ಲಿ ಅವರು ತಂತಮ್ಮ ಕೆಲಸಕಾರ್ಯಗಳನ್ನು ಬಹಳ ದಕ್ಷತೆಯಿಂದ, ಸರಿಯಾಗಿ ತೃಪ್ತಿಕರವಾಗಿ ಮಾಡುತ್ತಿದ್ದಾರೆಂದೂ ಹೇಳಿದ್ದಾರೆ. ಅವೆಲ್ಲವೂ ಇರಬಹುದು ನಿಜ. ಈ ಪ್ರವಾಹದಿಂದ ನೊಂದವರಿಗೆ, ಈ ಕಷ್ಟದಲ್ಲಿ ಸಿಕ್ಕಿದವರಿಗೆ ಸರ್ಕಾರದವರು ಅನೇಕ ರೀತಿಗಳಲ್ಲಿ ಪರಿಹಾರಗಳನ್ನು ನೀಡಿದ್ದೇವೆಂದು ಹೇಳಿದರೂ ಕೂಡ ಅವರಿಗೆ ಯಾವಯಾವ ರೀತಿ ಪರಿಹಾರ ದೊರಕಬೇಕಾಗಿತ್ತೊ ಆ ರೀತಿ ದೊರಕಿಲ್ಲವೆಂದು ನಾನು ಖಂಡಿತವಾಗಿ ಹೇಳುತ್ತೇನೆ. ಪರಿಹಾರ ಕೊಡತಕ್ಕದ್ದೇನೋ ಒಳ್ಳೆಯದು. ಪರಿಹಾರ ಬೇಕು ಎಂದು ಕೇಳುವವರು ಹೇಗೆ ಬರುವುದು, ಅವರು ಹೇಗೆ ಬಂದು ಪರಿಹಾರವನ್ನು ನಮಗೆ ಕೊಡಿ ಎಂದು ಕೇಳಿಯಾರು, ಅವರಿಗೆ ಆ ಸಂದರ್ಭದಲ್ಲಿ ಎಷ್ಟು ಕಷ್ಟ ಪರಿಸ್ಥಿತಿ ಇರುತ್ತದೆ, ಎಷ್ಟರಮಟ್ಟಿಗೆ ಪರಿಹಾರ ಕೇಳುವವರು ಕಷ್ಟನಷ್ಟಗಳಿಗೆ ಮತ್ತು ತೊಂದರೆಗೆ ಈಡಾಗಿರುತ್ತಾರೆಂಬುದನ್ನು ರೆವಿನ್ಯೂ ಮಂತ್ರಿಗಳು ಸರಿಯಾಗಿ ಯೋಚನೆ ಮಾಡಲಿಲ್ಲವೆಂದು ನಾನು ಹೇಳುತ್ತೇನೆ. ಈಗ ಇನ್ನೂ ಅನೇಕ ಕಡೆಗಳಲ್ಲಿ ಪ್ರವಾಹದ ಹಾವಳಿ ಇದ್ದೇ ಇದೆ. ಅದನ್ನು ತಡೆಯುವುದಕ್ಕೆ ತಕ್ಕ ಪರಿಹಾರ ಕ್ರಮಗಳನ್ನು ಸರ್ಕಾರದವರು ಇನ್ನೂ ಕೈಗೊಳ್ಳುತ್ತಿದ್ದೇವೆಂದು ಹೇಳುತ್ತಿರುವುದನ್ನು ನೋಡಿದರೆ ನನಗೇಕೋ ಭಯವಾಗುತ್ತಿದೆ. ಏಕೆಂದರೆ ಅನೇಕ ಜಮೀನುಗಳಲ್ಲಿ ನೀರು ತುಂಬಿಹೋಗಿದೆ. ಬೆಳೆಗಳೆಲ್ಲವೂ ನಾಶವಾಗಿ ಹೋಗಿವೆ. ಇಂತಹ ಪರಿಸ್ಥಿತಿಯಲ್ಲಿ ಇವೊತ್ತಿನವರೆಗೂ ಪ್ರವಾಹ ಇನ್ನೂ ಬಿಟ್ಟಿಲ್ಲ; ಅಂದಮೇಲೆ ಇವೊತ್ತು ಒಂದು ತಾತ್ಕಾಲಿಕವಾದ ವರದಿಯನ್ನು ಈ ಸಭೆಯ ಮುಂದಿಟ್ಟು ದೇಶದಲ್ಲಿ ಇಷ್ಟು ನಾಶವಾಗಿದೆ, ಈಗೀಗ ವರದಿಗಳು ಬರುತ್ತಿದೆ ಎಂಬುದಾಗಿ ಕಂದಾಯ ಮಂತ್ರಿಗಳು ಹೇಳಿದರು. ಈಗ ಪ್ರತಿಯೊಂದು ತಾಲ್ಲೂಕಿನಲ್ಲೂ ಮತ್ತು ಪ್ರತಿಯೊಂದು ಹೋಬಳಿಯಲ್ಲೂ ಯಾವ ಯಾವ ರೀತಿ ಎಷ್ಟೆಷ್ಟು ನಾಶವಾಗಿದೆ ಎನ್ನತಕ್ಕಂಥಾದ್ದನ್ನು ಅಸೆಸ್ ಮಾಡುವುದಕ್ಕೆ ತೊಂದರೆಯಾಗಿರುವ ಕಾಲದಲ್ಲಿ ಎಷ್ಟು ಪೂರ್ತಿ ನಷ್ಟವಾಗಿದೆಯೆಂಬುದನ್ನು ಖಚಿತವಾಗಿ ಸರಿಯಾಗಿ ಯೋಚನೆ ಮಾಡಿದರೂ ಅದನ್ನು ಹೇಳುವುದೇ ಅಸಾಧ್ಯ. ಇವೊತ್ತು ನನ್ನ ಮಾನ್ಯ ಸ್ನೇಹಿತರು ಮೈಸೂರು ದೇಶದಲ್ಲಿ ಬಹಳ ನಷ್ಟವಾಗಿದೆ, ಅದಕ್ಕೋಸ್ಕರ ಕೇಂದ್ರ ಸರ್ಕಾರದವರನ್ನು ಎರಡು ಕೋಟಿ ರೂಪಾಯಿಗಳ ಸಹಾಯ ಕೇಳಬೇಕು ಎಂಬುದಾಗಿ ಹೇಳಿದರು. ಎಷ್ಟು ಪೂರ್ತಿ ಅಲ್ಲಿ ನಷ್ಟವಾಗಿದೆ, ಎಷ್ಟು ಪೂರ್ತಿ ಬೆಳೆ ನಾಶವಾಗಿದೆ ಎಷ್ಟರಮಟ್ಟಿಗೆ ಅಲ್ಲಿನ ಜನಗಳು ಕಷ್ಟನಷ್ಟಗಳಿಗೆ ಈಡಾಗಿದ್ದಾರೆ, ಅದು ಯಾವ ತರಹ ನಾಶವಾಗಿದೆ ಎನ್ನುವುದನ್ನು ಸರ್ಕಾರದವರು ಮುಂದಾಲೋಚನೆ ಮಾಡದೆಯೇ ಇನ್ನೊಬ್ಬರನ್ನು ಸಹಾಯ ಕೇಳುವುದು ನ್ಯಾಯವೇ ಎನ್ನುವುದನ್ನು ನಾನು ಪ್ರಶ್ನೆ ಮಾಡಿ ಕೇಳುತ್ತೇನೆ. ನಮಗೆಷ್ಟು ನಷ್ಟವಾಗಿವೆ; ಯಾವ ಯಾವ ರೂಪದಲ್ಲಿ ನಷ್ಟವಾಗಿದೆ; ರಸ್ತೆಗಳೆಷ್ಟು ಹಾಳಾಗಿವೆ; ಸೇತುವೆಗಳೆಷ್ಟು ಮುರಿದುಬಿದ್ದಿವೆ; ಕೆರೆಗಳೆಷ್ಟು ಒಡೆದುಹೋಗಿವೆ, ಎಂಬುದನ್ನೆಲ್ಲಾ ಲೆಕ್ಕಕ್ಕೆ ತೆಗೆದುಕೊಂಡು ನಮಗಿಷ್ಟೇ ನಷ್ಟವಾಗಿದೆಯೆಂದು ಹೇಳುವುದು ಅಗತ್ಯ ಅಲ್ಲದೆ. ಜನರಿಗೆ ನಾನಾ ರೀತಿಯಲ್ಲಿ ಕಷ್ಟನಷ್ಟಗಳಾಗಿರುತ್ತವೆ. ಮೈದಾನ ಪ್ರದೇಶಕ್ಕೂ-ಮಲೆನಾಡಿಗೂ ಕೆಲವು ವಿಚಾರಗಳಲ್ಲಿ ಬಹಳ ವ್ಯತ್ಯಾಸವಿದೆ. ಮೈದಾನದಲ್ಲಿ ಯಾವಾಗ ಬೇಕಾದರೂ ಬತ್ತವನ್ನು ಬೆಳೆಯಬಹುದು. ಆದರೆ ಮಲೆನಾಡಿನ ಸ್ಥಿತಿ ಹಾಗಲ್ಲ. ಅಲ್ಲಿ ವರ್ಷಕ್ಕೊಂದು ಬತ್ತದ ಬೆಳೆ ಆದರೆ ಹೆಚ್ಚು. ಅದಕ್ಕೆ ಸೀಜನ್ ಬೇಕು. ವರ್ಷದಲ್ಲಿ ಯಾವಾಗಬೇಕೆಂದರೆ ಆಗ ಅಲ್ಲಿ ಬತ್ತ ಬೆಳೆಯಲು ಸಾಧ್ಯವಿಲ್ಲ. ಎಲ್ಲೋ ಅಲ್ಲಿಷ್ಟು ಇಲ್ಲಿಷ್ಟು ನೀರಿನ ಸೌಕರ್ಯವಿರುವಕಡೆ ಬೆಳೆದಾರು. ಇದೇ ಮೈದಾನಕ್ಕೂ ಮಲೆನಾಡಿಗೂ ಇರತಕ್ಕ ವ್ಯತ್ಯಾಸ. ಈ ದಿವಸ ಮಲೆನಾಡಿನಲ್ಲಿ ಸಾವಿರಾರು ಎಕರೆ ಜಮೀನು ಹೊಳೆ ನೀರಿನಿಂದ ಕೊಚ್ಚಿಹೋಗಿದೆ, ಇನ್ನು ಕೆಲವು ಕಡೆ ಹೂಳು ಮುಚ್ಚಿ ಜಮೀನೆಲ್ಲವೆ ಎಂಬುದು ತಿಳಿಯದಂತಾಗಿದೆ.

ರೆವಿನ್ಯೂ ಮಂತ್ರಿಗಳೂ ಸಹ ನನ್ನಹಾಗೆ ಮಲೆನಾಡಿನಿಂದ ಬಂದವರು. ಆದರೆ ಅವರು ಈ ದಿವಸ ಕಷ್ಟನಷ್ಟಗಳಿಗೊಳಗಾದ ರೈತರಿಗೆ ಬೀಜದ ಬತ್ತ ಕೊಡಲಾಗುವುದೆಂದು ಹೇಳಿದರು. ಅವರು ಹಾಗೆ ಕೊಡಬಹುದು. ಆದರೆ ಈ ದಿವಸ ನಾವು ಬತ್ತದ ಬೀಜ ಬಿತ್ತಿ ಪೈರು ಬೆಳೆಯಲು ಸಾಧ್ಯವೇ ಎಂಬುದನ್ನು ಅವರು ಆಲೋಚನೆ ಮಾಡಿಲ್ಲವೆಂದು ಕಾಣುತ್ತದೆ. ಹಾಗೊಂದು ವೇಳೆ ಸರ್ಕಾರದವರು ಮೂರು ತಿಂಗಳ ಬತ್ತ ಎಂಬ ಒಂದು ಜಾತಿ ಭತ್ತವಿದೆ; ಆ ಬೀಜವನ್ನು ಈ ಕೂಡಲೇ ಒದಗಿಸಿದರೆ ಮಲೆನಾಡಿನಲ್ಲಿ ಈ ಒಂದು ಜಾತಿಯ ಬತ್ತದ ಬೆಳೆ ತೆಗೆಯಲು ಸಾಧ್ಯವಿದೆ. ಆದರೆ ಅಗ್ರಿಕಲ್ಚರಲ್ ಇಲಾಖೆಯಲ್ಲಿ ಈ ಜಾತಿಯ ಬೀಜದ ಬತ್ತ ಎಷ್ಟು ಸ್ಟಾಕಿದೆ? ಅದಿಲ್ಲ ಈ ಬೀಜ ಸಾಕಷ್ಟಿಲ್ಲ. ಹೀಗಿರುವಾಗ ಸರ್ಕಾರದವರು ರೈತರಿಗೆ ನೀಡತಕ್ಕ ಸಹಾಯ ಎಷ್ಟರಮಟ್ಟಿಗಿದೆ ನೋಡಿ! ಈ ದಿವಸ ನಾಟಿ ಹಾಕಿದರೇನೇ ಈ ಮೂರು ತಿಂಗಳ ಬತ್ತ ಆಗುವುದು. ಈಗ ತುರ್ತು ನಾಟಿ ಹಾಕಿದರೇನಾದರೂ ತೆನೆ ಹೊರಟು ಬೆಳೆ ಆಗಬಹುದು. ಇನ್ನು ಕೆಲವು ದಿವಸ ಬಿಟ್ಟು ನಾಟಿ ಹಾಕಿದರೆ ಮುಂದೆ ಈ ಬೆಳೆ ಹಿಮದ ಹೊಡೆತಕ್ಕೆ ಸಿಕ್ಕಿ ತೆನೆಯಲ್ಲಾ ಹಾಳಾಗಿ ಹೋಗುತ್ತದೆ. ಮಲೆನಾಡಿನ ಸನ್ನಿವೇಶ ಹೀಗಿದೆ. ಈ ದಿವಸ ಅಂತೂ ಇಂತೂ ಬತ್ತದ ಬೆಳೆಯಾಗತಕ್ಕ ಸಾವಿರಾರು ಎಕರೆ ಜಮೀನು ಹಾಳಾಗಿ ಹೋಗಿದೆ. ಮಲೆನಾಡಿನಲ್ಲಿ ಮಳೆ ಬಂದು ಬರ ತಂದಿತೆಂದು ಹೇಳಬೇಕಾಗಿದೆ. ಮಲೆನಾಡು ರೈತರಿಗೆ ಹೀಗೆ ಇದ್ದ ಒಂದು ಸೀಜನ್ ಸಹ ಕೈತಪ್ಪಿ ಹೋದ ಮೇಲೆ ಅವರು ಅಲ್ಲಿ ಮಾಡಲು ಬೇರೆ ಕೆಲಸವಾದರೂ ಏನಿದೆ? ಈಗಾಗಲೇ ಆ ಮಲೆನಾಡಿನ ರೈತರೆಲ್ಲ ಮತ್ತೆ ಜಮೀನನ್ನು ಸರಿಪಡಿಸಿ ಬೀಜ ಬಿತ್ತಿ ಭತ್ತದ ಬೆಳೆಯನ್ನು ಈ ವರ್ಷ ತೆಗೆಯುತ್ತೇವೆಂಬ ಆಶೆಯಂತೂ ಸಂಪೂರ್ಣವಾಗಿ ಕೈಬಿಟ್ಟಿದ್ದಾರೆ. ಹೀಗೆ ಈ ಮಳೆ ಮತ್ತು ಪ್ರವಾಹದ ಹಾವಳಿಯಿಂದ ರೈತರಿಗೆ ಉಂಟಾಗಿರತಕ್ಕ ಕಷ್ಟ-ನಷ್ಟಗಳು ಒಂದು ರೀತಿಯಲ್ಲಿಲ್ಲ. ಆದಾಗ್ಯೂ ಸರ್ಕಾರದವರು ಯಾವುದೋ ಒಂದು ದೃಷ್ಟಿಯಿಂದ ಇಷ್ಟು ಲುಕ್ಸಾನಾಗಿರುತ್ತವೆಂದು ಈಗ ಒಂದು ಸ್ಟೇಟ್‌ಮೆಂಟನ್ನು ಮಾಡಿದ್ದಾರೆ. ಪ್ರವಾಹದ ಹಾವಳಿಗೆ ತುತ್ತಾಗಿ ಎಷ್ಟು ಬೆಳೆ ನಾಶವಾಗಿರುತ್ತದೆಂಬ ಒಂದೇ ಅಂಶವನ್ನು ಸರ್ಕಾರದವರು ಗಮನದಲ್ಲಿಟ್ಟುಕೊಂಡು ಅಷ್ಟು ಲುಕ್ಸಾನಾಗಿರುತ್ತದೆಂದು ಹೇಳಿದ್ದಾರೆ. ಆದರೆ ಅನೇಕ ಕಡೆ ಆರಿಂಚು-ಐದು ಇಂಚಿನ ಭತ್ತದ ಪೈರಿರುವ ಕಡೆ ತಗ್ಗುವರಿ ಪ್ರದೇಶಗಳಲ್ಲಿ 2-3 ತಿಂಗಳ ಕಾಲ ನೀರು ಒಂದೇ ಸಮನಾಗಿ ನಿಂತುಬಿಟ್ಟರೆ ಆ ಪೈರಿನ ಗತಿಯೇನಾದೀತು? ಈ ರೀತಿಯಲ್ಲಿ ರೈತರಿಗೆಷ್ಟು ನಷ್ಟವಾಗಿದೆಯೆಂಬ ಅಂಶವನ್ನು ರೈತನೇ ಬಲ್ಲ; ಅದು ಸರ್ಕಾರದವರಿಗೆ ಹೇಗೆ ಗೊತ್ತಾಗಬೇಕು? ಮೇಲಾಗಿ ನಾಟಿ ಹಾಕಿದ್ದ ಕಡೆಗಳಲ್ಲಂತೂ ಎಷ್ಟೋ ಕಡೆ ಕೊಚ್ಚಿಹೋಗಿ ಬೆಳೆ ಹಾಳಾಗಿದೆ. ಈ ದಿವಸ ಪ್ರಕೃತಿ ವಿಕೋಪಕ್ಕೆ ತುತ್ತಾಗಿ ಜನಗಳಿಗೆ ಉಂಟಾಗಿರತಕ್ಕ ನಷ್ಟವೆಷ್ಟೆಂಬುದನ್ನು ಪರಿಶೀಲಿಸುವಾಗ ಈ ಪ್ರಶ್ನೆಯನ್ನು ನಾನಾ ಮುಖವಾಗಿ ನೋಡಿ ಮಾಡಬೇಕಾಗಿದೆ. ಮಲೆನಾಡಿನಲ್ಲಿ ಈ ದಿವಸ ನಾನು ಹೇಳುವುದಾದರೆ ಈ ಪ್ರಕೃತಿ ವಿಕೋಪಕ್ಕೆ ತುತ್ತಾಗಿ ಹಾಳಾಗಿ ಹೋಗಿರತಕ್ಕ ಬೆಳೆ, ಜಮೀನು-ಮನೆ-ಮಠಗಳನ್ನೆಲ್ಲ ಲೆಕ್ಕಹಾಕಿ ನೋಡಿದರೆ ಅದು ಕೋಟ್ಯಾಂತರ ರೂಪಾಯಿಗಳಾಗುತ್ತದೆ. ಉದಾಹರಣೆಗಾಗಿ ಹೇಳುವುದಾದರೆ ಹಾಸನ ಜಿಲ್ಲೆಯಲ್ಲಿ ಈಗ ನಾಲ್ಕು ತಾಲ್ಲೂಕುಗಳಲ್ಲಿ ಆಲೂಗೆಡ್ಡೆಯನ್ನು ಬೆಳೆಯುತ್ತಿದ್ದಾರೆ. ಈ ವರ್ಷ ರೈತರು ಸುಮಾರು ಒಂಬತ್ತು-ಹತ್ತು ಲಕ್ಷ ರೂಪಾಯಿಗಳ ಬೀಜದ ಆಲೂಗೆಡ್ಡೆಯನ್ನೇ ಕೊಂಡಿದ್ದರು. ಈ ಬೆಳೆ ಆ ರೈತರಿಗೆ ಪೂರ್ಣವಾಗಿ ಕೈಸೇರಿದ್ದರೆ ಅದು ಒಂದೂವರೆ ಕೋಟಿ ರೂಪಾಯಿಗಳ ಬೆಳೆ ಆಗುತ್ತಿತ್ತು. ಈ ದಿವಸ ಹಾಸನ ಜಿಲ್ಲೆಯ ನಾಲ್ಕು ತಾಲ್ಲೂಕುಗಳಲ್ಲಿ ಈ ಆಲೂಗೆಡ್ಡೆ ಬೆಳೆಯೊಂದು ಸಂಪೂರ್ಣವಾಗಿ ಹಾಳಾದುದರಿಂದ ರೈತರಿಗೆ ಈ ಒಂದು ಬೆಳೆಯಿಂದಲೇ ಈ ವರ್ಷ ಒಂದುವರೆ ಕೋಟಿ ರೂಪಾಯಿಗಳು ಲುಕ್ಸಾನಾಗಿದೆ. ನೀಲಗಿರಿಯಲ್ಲೂ ಸಹ ಈ ಬೆಳೆ ಸಂಪೂರ್ಣವಾಗಿ ಹಾಳಾಗಿದೆ.

ಇನ್ನು ಪ್ಲಾಂಟೇಷನ್‌ಗಳ ವಿಚಾರಕ್ಕೆ ಬಂದರೆ, ಅಲ್ಲಿರತಕ್ಕದ್ದೆಲ್ಲ ಮೆಣಸು, ಕಾಫಿ ಮತ್ತು ಏಲಕ್ಕಿ ಈ ಮೂರು ಮಾತ್ರ. ಏಲಕ್ಕಿ ಗಿಡಗಳೆಲ್ಲ ಕೊಳೆತುಹೋದುವು; ಮಳೆ ನೀರಿನ ಹೊಡೆತಕ್ಕೆ,

(ಶ್ರೀ ಟಿ. ಎಚ್. ಬೋರಣ್ಣಗೌಡ)

ಕಾಫಿ ಹೂಗಳೆಲ್ಲ ಉದುರಿ ಆ ಬೆಳೆಯೂ ಹಾಳಾಯಿತು. ಅದರಂತೆ ಮೆಣಸಿನ ಗೊನೆಗಳು ಬಿದ್ದು ಅದೂ ಹಾಳಾಯಿತು ; ಈ ಲುಕ್ಸಾನನ್ನು ಹೇಗೆ ಭರ್ತಿಮಾಡುವುದು ? ಅಲ್ಲಿ ಪರಿಸ್ಥಿತಿ ಹೀಗಿರುವಾಗ ಆ ಜನರು ಜೀವನ ಮಾಡುವುದಾದರೂ ಹೇಗೆ ? ಈ ದಿವಸ ಆ ಜನರ ಜೀವನದ ಮಟ್ಟವನ್ನು ಕಾಪಾಡುವುದು ಹೇಗೆ ಎಂಬುದನ್ನು ಸರ್ಕಾರದವರು ಆಲೋಚನೆ ಮಾಡಿದ್ದಾರೇನು ? ಕೆಲವು ಶ್ರೀಮಂತರಾಗಿರತಕ್ಕ ಪ್ಲಾಂಟರುಗಳೇನೋ ಬ್ಯಾಂಕುಗಳಿಂದ ಸಾಲಾ ತಂದು ತಮ್ಮ ಜೀವನ ಜರುಗಿಸಬಹುದು. ಆದರೆ ಬಡ ಜನರ ಗತಿಯೇನು ? ಬಡವರಿಗೆ ಸಾಲಾ ಸಿಕ್ಕುವುದು ದುರ್ಲಭ. ಇವರು ಯಾವತ್ತೂ ಆ ಶ್ರೀಮಂತರನ್ನೇ ಅವಲಂಬಿಸಿಕೊಂಡಿರುತ್ತಾರೆ. ಕೆಲವರಂತೂ ಶ್ರೀಮಂತರ ಜಮೀನನ್ನು ಸಾಗುವಳಿಮಾಡೇ ತಮ್ಮ ಜೀವನ ಜರುಗಿಸಬೇಕಾಗಿದೆ. ಆದರೆ ಅಲ್ಲಿ ಸಧ್ಯಕ್ಕೆ ಭೂಮಿಯಲ್ಲಿ ಬೆಳೆ ತೆಗೆಯಲು ಸಾಧ್ಯವಿಲ್ಲ. ಹೀಗೆ ಬಡವರಂತೂ ನಾನಾ ಕಷ್ಟಗಳಿಗೆ ಗುರಿಯಾಗಿದ್ದಾರೆ. ಇಂಥ ಪರಿಸ್ಥಿತಿಯಲ್ಲಿರತಕ್ಕ ಜನರಿಗೆ ಮಾನ್ಯ ಮಂತ್ರಿಗಳು ಹತ್ತು ರೂಪಾಯಿಗಳಿಂದ 100 ರೂಪಾಯಿಗಳ ತನಕ ಸಹಾಯ ಮಾಡಬಹುದು ಎಂಬುದಾಗಿ ಅಪ್ಪಣೆ ಕೊಡಿಸಿದ್ದು ತುಂಬಾ ಶೋಚನೀಯವಾಗಿದೆ. ಯಾರಾದರೂ ಒಂದು ಮನೆ ಬಿಂದುಹೋದರೆ ಅದರಿಂದ ಲುಕ್ಸಾನೆಷ್ಟಾಗಿದೆ ಎಂಬುದನ್ನು ಆಲೋಚನೆ ಮಾಡದೆ ಆ ನೊಂದವನಿಗೆ ಕೇವಲ 10 ರೂಪಾಯಿಗಳನ್ನು ಕೊಡುತ್ತಾರೆ. ಏತಕ್ಕೆ ? ಗೋಣಿಚೀಲ ಹೊದೆದುಕೊಂಡು ಕುಳಿತುಕೊಳ್ಳಲು ಎಂದು ! ಇಂಥ ಸಹಾಯದಿಂದ ಏನು ಅನುಕೂಲ ಮಾಡಿದಂತಾಯಿತು ? ಇಂಥ ಸಹಾಯವನ್ನು ಮಾಡದಿದ್ದರೆ ತಾನೆ ಏನಾಗಿತ್ತು ! ಈ ದಿವಸ ಒಬ್ಬ ಟೆನೆಂಟಿಗೆ ಆತನ ಪರ್ಸನಲ್ ಸೆಕ್ಯೂರಿಟಿಯ ಮೇಲಾದರೂ 150 ರೂಪಾಯಿಗಳ ಸಾಲ ಕೊಟ್ಟರೆ ಸಾಕೇನು ? ನೀವು ಯಾವಾಗ ಆತನಿಗೆ ಉದಾರವಾಗಿ ಸಹಾಯ ನೀಡುವುದಿಲ್ಲವೋ ಆಗ ಆ ಬಡ ರೈತ ಆ ಶ್ರೀಮಂತರ ಮರೆ ಹೋಗಲೇಬೇಕು. ಆಗ ಅವರು 150 ರೂಪಾಯಿ ಕೊಟ್ಟರೆ 450 ರೂಪಾಯಿಗಳಿಗೆ ಪತ್ರ ಬರೆಸಿಕೊಳ್ಳುತ್ತಾರೆ. ಜಮೀನು ಬೇಸಾಯ ಮಾಡಿ ಸಾಲ ತೀರಿಸೋಣವೆಂದರೆ ಹೊಳೆ ಬಂದು ಅದು ಮುಚ್ಚಿಹೋಗಿದೆ. ಅಂತು ರೈತ ಹಾಗೂ ಹಾಳಾದ ಹೀಗೂ ಹಾಳಾದ ! ಹೀಗೆಲ್ಲಾ ಇರುವಾಗ ನಮ್ಮ ಅಧಿಕಾರಿಗಳು ಈ ದಿವಸ ಸರ್ಕಾರಕ್ಕೆ ಆ ರೈತನ ನಿಜ ಪರಿಸ್ಥಿತಿ ಏನಾಗಿದೆ ಎಂಬುದನ್ನೆಲ್ಲ ಸರಿಯಾಗಿ ದಾಖಲೆ ಕೊಟ್ಟಿದ್ದಾರೇನು ? ಆದುದರಿಂದ ಸರ್ಕಾರದವರು ರೈತನ ವಿಚಾರದಲ್ಲಿ ಕನಿಕರವಿದ್ದರೆ ಆತನಿಗೆ ಸೆಕ್ಯೂರಿಟಿ ವಗೈರೆ ಕೇಳದೆ 100 ಅಲ್ಲ 150 ರೂಪಾಯಿಗಳ ಸಾಲವನ್ನಾದರೂ ಕೊಡಿ. ಅದೆಲ್ಲೂ ಹೋಗುವುದಿಲ್ಲ. ರೈತನಿಗೆ ಕೊಟ್ಟ ದುಡ್ಡು ಇಂದಲ್ಲಾ ನಾಳೆ ಸರ್ಕಾರಕ್ಕೆ ಬಂದೇ ಬರುತ್ತದೆ. ಬಡವನಾದವನು ಸರ್ಕಾರದ ದುಡ್ಡನ್ನು ಹಿಂದಿರುಗಿಸಲು ಯಾವತ್ತೂ ಹಿಂಜರಿದಿಲ್ಲ. ಅವರಿಗೆ ಸರ್ಕಾರ ಒಂದು ಟೋಕನ್‌ಗ್ರ್ಯಾಂಟ್ ಕೊಟ್ಟ ಹಾಗೆ ಒಂದಷ್ಟು ಹಣವನ್ನು ಲಂಪ್‌ಸಂ ಆಗಿ ಕೊಡಬೇಕೆಂದು ಹೇಳುತ್ತೇನೆ. ಮನೆ-ಮಠ-ಆಸ್ತಿಗಳನ್ನು ಕಳೆದುಕೊಂಡವರಿಗೆ ಸರ್ಕಾರ ಸಹಾಯ ನೀಡಬೇಕಾದುದು ಧರ್ಮ. ಈಗ ಸರ್ಕಾರದವರು ಲ್ಯಾಂಡ್ ಇಂಪ್ರೂವ್‌ಮೆಂಟ್ ಮತ್ತು ತಕಾವಿ ಸಾಲಗಳನ್ನು 10 ಕಂತುಗಳಲ್ಲಿ ವಾಪಸ್ಸು ಕೊಡಬೇಕೆಂದೂ ಹಾಗೆ ಕೊಡದೆ ಹೋದರೆ ಆ ಸಾಲಗಳನ್ನೇ ಯಾರಿಗೂ ಕೊಡಕೂಡದೆಂಬುದಾಗಿ ಆಜ್ಞೆ ಮಾಡಿದ್ದಾರೆಂದು ಕೇಳುತ್ತೇನೆ. ನಾನು ಮೊನ್ನೆ ತಾನೆ ಮಲೆನಾಡಿನಲ್ಲಿ ನನ್ನ ಕ್ಷೇತ್ರದಲ್ಲಿ ಸಂಚಾರ ಮಾಡಿ ಜನರ ಸ್ಥಿತಿ-ಗತಿಗಳೇನಾಗಿರುತ್ತವೆಂಬುದನ್ನು ನೋಡಿದ್ದೇನೆ. ಅಲ್ಲೆಲ್ಲಾ ಈ ಕಷ್ಟ-ನಷ್ಟಗಳಿಗೆ ಗುರಿಯಾದ ಜನರಿಗೆ ಒಂದು ಲಂಪ್‌ಸಂ ಗ್ರ್ಯಾಂಟ್ ಕೊಡಬಹುದೆಂದೂ ಮತ್ತು ಅದರ ಜೊತೆಗೆ ತಕಾವಿ-ಲ್ಯಾಂಡ್ ಇಂಪ್ರೂವ್‌ಮೆಂಟ್ ಲೋನುಗಳನ್ನೂ ಸಹ ಕೊಡಬಹುದೆಂದು ಹುಕುಂ ಮಾಡಿದ್ದಾರೆ. ಆದರೆ ನಮ್ಮ ಡಿವಿಜನ್ನಿಗೆ 20 ಲಕ್ಷ ಹಣ ಕೊಟ್ಟರೆ ಸಾಕೇನು ? ಈ ಡಿವಿಜನ್ನಿನಲ್ಲಿ ಒಟ್ಟು ಐದು ಜಿಲ್ಲೆಗಳಿವೆ. ಆ ಪೈಕಿ ಚಿಕ್ಕಮಗಳೂರು-ಹಾಸನ ಮತ್ತು ಮಂಗಳೂರು ಈ ಮೂರು ಜಿಲ್ಲೆಗಳಲ್ಲೇ ಈ ಹೊಳೆಗಳ ಅವಾಂತರ ಹೆಚ್ಚಾಗಿ ವಿಪರೀತ ಲುಕ್ಸಾನಾಗಿದೆ. ಈ ಮೊಬಲಗನ್ನು ನೋಡಿದರೆ ಸರ್ಕಾರದವರು ಮಾಡಿರುವ ಅಂದಾಜು ಸರಿಯಾಗಿರುತ್ತದೆಂದು ಹೇಳುವುದಕ್ಕಾಗುವುದಿಲ್ಲ.

ಚಿಕ್ಕಮಗಳೂರು ಜಿಲ್ಲೆಯೊಂದರಲ್ಲೇ ಒಂದೂವರೆ ಕೋಟಿಗಿಂತ ಹೆಚ್ಚಿನ ನುಕ್ಸಾನಾಗಿದೆ ಎಂಬುದಾಗಿ ನನಗೆ ಈಗಾಗಲೇ ಸ್ವಲ್ಪ ಮಟ್ಟಿಗೆ ತಿಳಿದುಬಂದಿದೆ. ಹಾಸನ ಜಿಲ್ಲೆಯಲ್ಲೂ ಒಂದೂವರೆ ಕೋಟಿಗಿಂತ ಹೆಚ್ಚಿಗೆ ನುಕ್ಸಾನಾಗಿದೆ. ಹೀಗಿರುವಾಗ ಸರ್ಕಾರದವರು ವಾಸ್ತವಾಂಶಗಳೇನಿರುತ್ತವೆಂಬುದನ್ನು ಸರಿಯಾಗಿ-ನ್ಯಾಯವಾಗಿ ಅಸೆಸ್ ಮಾಡದೆ ಹೀಗೆಲ್ಲಾ ಹೇಳಬಾರದು. ಆದರೆ ರೆವಿನ್ಯೂ ಮಂತ್ರಿಗಳು ಚಿಕ್ಕಮಗಳೂರು ಟೌನಿನ ವಿಚಾರವೊಂದನ್ನೇನೋ ಹೇಳಿದರು. ಆದರೆ ಅವರು ಕೇವಲ ಗಣ್ಯವ್ಯಕ್ತಿಗಳ ವಿಚಾರ ಹೇಳಿರಬಹುದು. ಆದರೆ ಅದರಂತೆಯೇ ಎಷ್ಟು ಜನ ಬಡವರ ಮನೆಗಳು ಬಿದ್ದುಹೋಗಿ ಅವರ ಜಮೀನುಗಳೂ ಮುಚ್ಚಿಹೋಗಿರುತ್ತವೆಂಬ ವಿಚಾರವನ್ನೇನೂ ಅವರು ವಿಶದಪಡಿಸಲಿಲ್ಲ. ಈ ತರಹದ ಕಷ್ಟಕ್ಕೆ ಜನರು ಹಾಸನದ ಜಿಲ್ಲೆಯಲ್ಲಿ ಈಡಾಗಿದ್ದಾರೆ. ಹಾಸನದ ಜಿಲ್ಲೆಗೆ ಒದಗಿಸಿರುವ 22 ಲಕ್ಷ ರೂಪಾಯಿಗಳ ಧನಸಹಾಯ ಬಹಳ ಕಡಿಮೆಯಾಗಿದೆ. ಈಗ ಒದಗಿಸಿರುವ ಹಣವನ್ನು ಸರಿಯಾಗಿ ವಿನಿಯೋಗಿಸಬೇಕೆಂಬ ಮನೋಭಾವನೆ ಅಧಿಕಾರಿಗಳಲ್ಲಿ ಇದೆಯೋ ಎಂಬುದನ್ನು ಆಲೋಚನೆ ಮಾಡಬೇಕು. ಕೆಲವು ಅಧಿಕಾರಿಗಳ ಮನೋಭಾವನೆ ಒಳ್ಳೆಯದಾಗಿರುತ್ತದೆ; ಅಂಥವರು ಸಹಾಯ ಮಾಡುತ್ತಾರೆ. ಆದರೆ ಉಳಿದವರ ಮನೋಭಾವನೆ ಒಳ್ಳೆಯದಾಗಿರುವುದಿಲ್ಲ, ಅಂಥವರ ಮನೋಭಾವನೆ ಯಾವ ರೀತಿ ಇದೆ ಎಂಬುದನ್ನು ನೋಡಬೇಕು. ಅವರು ನಿಜವಾಗಿಯೂ ಕಷ್ಟದಲ್ಲಿರುವ ಬಡ ಜನರಿಗೆ ಸಹಾಯ ಮಾಡುತ್ತಾರೆಯೇ ? ಈ 22 ಲಕ್ಷ ರೂಪಾಯಿ ಯಾರು ಯಾರಿಗೆ ಸೇರಬೇಕೋ ಯಾರಿಗೆ ಸಹಾಯವಾಗಬೇಕೋ ಅಂಥವರಿಗೆ ಮಾತ್ರ ಸಹಾಯವಾಗುತ್ತದೆ. ನಿಜವಾಗಿಯೂ ಬಡವರಿಗೆ ಸಹಾಯ ದೊರೆಯುವುದಿಲ್ಲ. ಆದುದರಿಂದ ಈ ವಿಚಾರದಲ್ಲಿ ಒಂದು set of rules ಮಾಡಿ ಒಂದು ಕಮಿಟಿಯನ್ನು ನೇಮಿಸಿ ಆ ಕಮಿಟಿಯ ಮುಂದೆ ಬಂದು ಹೇಳಿಕೊಂಡರೆ ತತ್‌ಕ್ಷಣ ಪರಿಹಾರ ಒದಗಿಸುವ ವ್ಯವಸ್ಥೆ ಮಾಡಬೇಕು. ಒಂದು ಉದಾಹರಣೆ ಹೇಳುವುದಾದರೆ ಶ್ರೀ ಕಡಿದಾಳ್ ಮಂಜಪ್ಪನವರು ಬಂದಾಗ್ಗೆ ಅವರಿಗೆ ಬಿನ್ನಹ ಮಾಡಿದರು. ಆದರೆ ಅವರಿಗೆ ಮೊನ್ನೆಯವರೆಗೆ ಸಹಾಯ ದೊರೆಯಲಿಲ್ಲ. ಈ ರೀತಿ ಅಧಿಕಾರಿಗಳ ಮನೋಭಾವನೆ ಇಟ್ಟುಕೊಂಡಿರುವುದು ಸರಿಯಲ್ಲ, ಬಡ ಜನರು ಎಷ್ಟು ಕಷ್ಟಪಡುತ್ತಿದ್ದಾರೆ ಎಂಬುದನ್ನು ಹೇಳುವುದಕ್ಕಾಗುವುದಿಲ್ಲ. ಇರುವುದಕ್ಕೆ ಮನೆಯಿಲ್ಲ, ಹೊದೆಯುವುದಕ್ಕೆ ಬಟ್ಟೆಯಿಲ್ಲ, ತಿನ್ನುವುದಕ್ಕೆ ಹೊಟ್ಟೆಗೆ ಅನ್ನವಿಲ್ಲ, ಅಂಥವರಿಗೆ ಒಂದು ನೂರು ರೂಪಾಯಿ ಸಹಾಯ ಕೊಡುವುದು ಎಂದರೇನು ? ಇದನ್ನು ಹೇಳುವುದಕ್ಕೆ ಎಷ್ಟು ವ್ಯಸನವಾಗುತ್ತಿದೆ ? ಹೊಟ್ಟೆಗೆ ಅನ್ನವಿಲ್ಲದೆ ಉಪವಾಸದಿಂದ ಕಷ್ಟಪಡುತ್ತಿದ್ದಾರೆ. ಬಡ ಜನರ ಹಸಿವು ಅವರ ಕಷ್ಟ ಏನಿದೆ ಎಂಬುದನ್ನು ಅಧಿಕಾರಿಗಳು ಅರ್ಥಮಾಡಿಕೊಳ್ಳುವುದಿಲ್ಲ. ಏಕೆಂದರೆ ಅಧಿಕಾರಿಗಳಿಗೆ ತಿಂಗಳಿಗೆ ತಪ್ಪದೆ ಸಂಬಳ ದೊರೆಯುತ್ತದೆ. ಆದುದರಿಂದ ರೈತನ ಪಾಡೇನು ? ರೈತನ ಗತಿ ಏನು ಎಂಬುದನ್ನು ಅಧಿಕಾರಿಗಳು ಸ್ವಲ್ಪ ಯೋಚನೆ ಮಾಡಬೇಕು ಮತ್ತು ಜಾಗ್ರತೆ ರೈತರಿಗೆ ಸಹಾಯ ಒದಗಿಸಿಕೊಡಬೇಕು. ಮಳೆಯಿಂದ ಅಪಾರ ನಷ್ಟ ಉಂಟಾಗಿದೆ. ಖಚಿತವಾಗಿ ಇಷ್ಟೇ ನಷ್ಟವಾಗಿದೆ ಎಂಬುದನ್ನು ತಿಳಿದುಕೊಳ್ಳುವವರೆಗೆ ಇಂತಿಷ್ಟು ನಷ್ಟವಾಗಿದೆ ಎಂದು ಹೇಳಿಕೊಳ್ಳುವುದು ತಪ್ಪಾಗುತ್ತದೆ. ಬೇಲೂರು ತಾಲ್ಲೂಕಿನಲ್ಲಿ 83 ಕೆರೆಗಳು ಒಡೆದು ಹೋಗಿವೆ. ಇದೊಂದೆ ತಾಲ್ಲೂಕಿನಲ್ಲಿ 19 ಲಕ್ಷ ರೂಪಾಯಿಗಳಷ್ಟು ಬೆಳೆ ನಷ್ಟವಾಗಿದೆ. ಸಕಲೇಶಪುರ ತಾಲ್ಲೂಕಿನಲ್ಲಿ 20 ಲಕ್ಷ ರೂಪಾಯಿ ಬೆಳೆ ನಷ್ಟವಾಗಿದೆ. ಅಲ್ಲಿ 60 ಕೆರೆಗಳು ಒಡೆದು ಹೋಗಿವೆ. ಆಲೂರು ಒಂದು ಹೋಬಳಿಯಲ್ಲಿ ಮಾತ್ರ ಅಫೆಕ್ಟ್ ಆಗಿದೆ, 23 ಕೆರೆಗಳು ಒಡೆದು ಹೋಗಿವೆ. ಇವುಗಳನ್ನು ಜಾಗ್ರತೆ ರಿಪೇರಿ ಮಾಡಿಸಬೇಕು. ಸರ್ಕಾರಿ ಕೆಲಸ ಅಂದ ಮೇಲೆ ತಡವಾಗುತ್ತದೆ. ಅದು ಯಾರಿಗೂ ಬೇಕಾಗಿಲ್ಲ. ಆದಷ್ಟು ಕೆಲಸ ಆಯಿತು ಹೋದಷ್ಟು ಕೆಲಸ ಹೋಯಿತು ಎಂಬ ಮನೋಭಾವನೆ ಬರುತ್ತದೆ. ಈ ರೀತಿ ಮಾಡುವುದು ಸರಿಯಲ್ಲ. ಅದಕೆ ತಕ್ಕ ಕ್ರಮವನ್ನು ಜಾಗ್ರತೆ ತೆಗೆದುಕೊಳ್ಳಬೇಕು. ಎಷ್ಟು ಜನರಿಗೆ ತೊಂದರೆಯಾಗಿದೆ ಎಂಬುದನ್ನು ಯೋಚನೆ ಮಾಡಬೇಕು. ಅನೇಕ ಜನರು ಸತ್ತುಹೋಗಿದ್ದಾರೆ. ಅನೇಕ ಹೆಣಗಳು ತೇಲಿ ಹೋಗಿವೆ.

(ಶ್ರೀ ಬಿ. ಎನ್. ಬೋರಣ್ಣಗೌಡ)

ಎಷ್ಟೋ ಹೆಣಗಳು ಉದಿಬಿಟ್ಟು ಬೇಲಿಗೆ ಮರಕ್ಕೆ ಸಿಕ್ಕಿಕೊಂಡಿವೆ. ದನಗಳ ಪಾಡಂತೂ ಹೇಳುವುದಕ್ಕಾಗುವುದಿಲ್ಲ. ಎಷ್ಟೋ ದನಗಳು ಸತ್ತುಹೋಗಿವೆ. ಇರುವ ದನಗಳಿಗೂ ಕೂಡ ತಿನ್ನುವುದಕ್ಕೆ ಹುಲ್ಲು ಇಲ್ಲ. ಮಲೆನಾಡಿನಲ್ಲಿ ಹೆಚ್ಚಿಗೆ ಹುಲ್ಲನ್ನು ಶೇಖರಣೆ ಮಾಡಿರುವುದಿಲ್ಲ, ಏಕೆಂದರೆ ದನಗಳಿಗೆ ಹಸಿಹುಲ್ಲು ದೊರೆಯುತ್ತದೆ. ಆದರೆ ಒಂದೂವರೆ ಎರಡು ತಿಂಗಳುಗಳಿಂದ ದನಗಳಿಗೆ ಹುಲ್ಲು ಇಲ್ಲ. ಎಷ್ಟೋ ದನಗಳು ಸತ್ತುಹೋಗಿವೆ. ಇದರಿಂದ ಕೊಟ್ಯಾಂತರ ರೂಪಾಯಿ ನಷ್ಟ ಆಗಿದೆ, ಆದುದರಿಂದ ನಮಗೆ ಒದಗಿಸಿರುವ ಅಂಕಿ ಅಂಶಗಳು ಸರಿಯಾಗಿಲ್ಲ. ನನಗೆ ಗೊತ್ತಿರುವ ಹಾಗೆ ಇದುವರೆಗೆ ಹಾಸನ ಜಿಲ್ಲೆಯ ರಿಪೋರ್ಟು ನಿಮಗೆ ಬಂದಿಲ್ಲ ರೆವಿನ್ಯೂ ಇನ್‌ಸ್ಪೆಕ್ಟರ್ ತಹಸಿಲ್‌ದಾರರಿಗೆ ವರದಿ ಕಳಿಸಬೇಕು, ಅಲ್ಲಿಂದ ಅದು ಸಬ್‌ಡಿವಿಜನ್ ಆಫೀಸರರಿಗೆ ಹೋಗಿ ಅನಂತರ ಡೆಪ್ಯೂಟಿಕಮಿಷನರಿಂದ ಡಿವಿಜನಲ್ ಕಮಿಷನರ್‌ರಿಗೆ ಹೋಗಬೇಕು. ಆ ಮೇಲೆ ಸರ್ಕಾರಕ್ಕೆ ವರದಿ ಬರುವುದು, ಇದಕ್ಕೆ ಹೆಚ್ಚು ದಿನಗಳು ಬೇಕಾಗುತ್ತವೆ. ಒಂದು ದಿನದಲ್ಲಿ ಆಗಬೇಕಾದ ಕೆಲಸಕ್ಕೆ ಎರಡು ಎರಡೂವರೆ ತಿಂಗಳು ಅವಧಿ ಆಗುತ್ತದೆ. ಈ ವ್ಯವಸ್ಥೆಯನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಎರಡು ತಿಂಗಳುಗಳಿಂದ ಜನರು ಕಷ್ಟದಲ್ಲಿದ್ದಾರೆ.

ಶ್ರೀ ಕಡಿದಾಳ್ ಮಂಜಪ್ಪ.—ಹೆಚ್ಚಾಗಿ ಮಳೆಯಾದುದು ಜುಲೈ ತಿಂಗಳಿನ ಮೊದಲನೆಯ ವಾರದಲ್ಲಿ. ಮೇ ತಿಂಗಳಿನಲ್ಲಿ ಚಿತ್ರದುರ್ಗ ಜಿಲ್ಲೆಯಲ್ಲಿ ಮಾತ್ರ ಮಳೆಯಾಗಿದೆ.

ಶ್ರೀ ಬಿ. ಎನ್. ಬೋರಣ್ಣಗೌಡ.—ಹಾಸನ ಜಿಲ್ಲೆಯಲ್ಲಿ ಅಗ್ಗೆ ಅಷ್ಟು ಹೆಚ್ಚಾಗಿ ಮಳೆಯಾಗದಿದ್ದರೂ, ಮಳೆಯಾಗಿದೆ, ಜನರಿಗೆ ನಷ್ಟವಾಗಿದೆ. ಜನರಿಗೆ ನಷ್ಟ ಉಂಟಾಗಿರುವುದನ್ನು ಫೋನ್ ಮೂಲಕ ತತ್‌ಕ್ಷಣವಲ್ಲಿ ತಿಳಿಸಬಹುದಾಗಿತ್ತು, ಅಂಕಿ ಅಂಶಗಳನ್ನು ತಿಳಿಸಬಹುದಾಗಿತ್ತು. ಆದರೆ ಅಧಿಕಾರಿಗಳ ಮನೋಭಾವನೆ ಬೇರೆ ರೀತಿಯಾಗಿರುತ್ತದೆ. ಗುಮಾಸ್ತನು ಬರೆದು ತಂದು ಇಟ್ಟರೆ ರುಜು ಹಾಕುತ್ತಾರೆ. ಗುಮಾಸ್ತ ತಂದು ಇಡುವುದಿಲ್ಲ; ಇವರು ಏನೂ ಮಾಡುವುದಿಲ್ಲ, ಈ ವಿಚಾರ ಹೀಗೆ ಇದೆ.

ರೈತನ ಕಷ್ಟವೇನು ಎಂಬುದು ಕುರ್ಚಿಯಲ್ಲಿ ಕುಳಿತುಕೊಂಡಿರುವವರಿಗೆ ಗೊತ್ತಿದ್ದರೆ ಅದಕ್ಕೆ ಪರಿಹಾರ ದೊರಕಿಸುವ ವಿಚಾರ ಮಾಡಬಹುದು. ಆದರೆ ಅವನ ಕಷ್ಟ ಅವನಿಗೆ, ನನ್ನ ಸುಖ ನನಗೆ ಎನ್ನುವ ಮನೋಭಾವನೆ ಇರುವುದಾದರೆ ಎಷ್ಟು ಮಾತ್ರ ನೆರವು ಸಿಕ್ಕುತ್ತದೆಂದು ಯೋಚನೆ ಮಾಡಬೇಕು. ಹಾಸನ ಜಿಲ್ಲೆಯಲ್ಲಿ ನನಗೆ ಗೊತ್ತಿರುವ ನಾಲ್ಕು ತಾಲ್ಲೂಕುಗಳಲ್ಲಿರುವ ಜನ ಬಹಳ ನಷ್ಟಕ್ಕೆ ಈಡಾಗಿದ್ದಾರೆ. ಆದುದರಿಂದ 20 ಸಾವಿರ ರೂಪಾಯಿಗಳನ್ನೂ ತಕ್ಷಣ ಸಹಾಯಕ್ಕೆ ಕೊಡಬೇಕು. ಹೇರಳವಾಗಿ ತಕಾವಿ ಮತ್ತು land improvement loan ಕೊಡಬೇಕೆಂದು ವಿಜ್ಞಾಪಿಸಿ, ನಾನು ವಿರಮಿಸುತ್ತೇನೆ.

ಶ್ರೀ ಜಿ. ವೆಂಕಟೇಗೌಡ (ಪಾಳ್ಯಂ).—ಮಾನ್ಯ ಸಭಾಪತಿಗಳೇ, ಈಗ ತಾನೇ ಶ್ರೀಮಾನ್ ಬೋರಣ್ಣಗೌಡರು ಹಾಸನ ಜಿಲ್ಲೆಯ ನಾಲ್ಕು ತಾಲ್ಲೂಕುಗಳ ದಾರುಣವಾದ ದುರಂತವನ್ನು ಚಿತ್ರಿಸಿದ್ದಾರೆ. ಅದೇ ರೀತಿ ನಮ್ಮ ದೇಶದಲ್ಲಿ ಅನೇಕ ಕಡೆ ಆಗಿದೆ ಎನ್ನತಕ್ಕ ವಿಚಾರ ನಮಗೆಲ್ಲರಿಗೂ ಗೊತ್ತಿರುವುದಾಗಿದೆ. ಅದಲ್ಲದೆ ಕೆಲವು ಜನ ಮಂತ್ರಿಗಳು ಸಹ ಆ ಸ್ಥಳಗಳಿಗೆ ಭೇಟಿ ಕೊಟ್ಟು ಖುದ್ದಾಗಿ ಪರಿಶೀಲನೆಯನ್ನು ನಡೆಸಿದ್ದಾರೆ. ನಮ್ಮ ಕಂದಾಯ ಮಂತ್ರಿಗಳು ಕೊಟ್ಟಿರತಕ್ಕ ವರದಿಯಲ್ಲಿ ಇನ್ನೂ ಹೆಚ್ಚಾದ ಅಂಕಿ ಅಂಶಗಳನ್ನು ಒದಗಿಸುವುದಕ್ಕೆ ಸಾಧ್ಯವಾಗಿಲ್ಲದೆಯಿರುವುದರಿಂದ ಸರ್ಕಾರದ ಎದುರಿಗೆ ಏನು ಸಮಾಚಾರ ಬಂದಿದೆಯೋ ಅದು ಮಾತ್ರ ಇದರಲ್ಲಿದೆ ಎಂದು ನಾನು ತಿಳಿಯುತ್ತೇನೆ.

ನಮ್ಮ ರೆವಿನ್ಯೂ ಮಂತ್ರಿಗಳು ಪ್ರಕೃತಿಯು ನಮ್ಮ ಮೇಲೆ ಕೋಪವನ್ನು ತಾಳಿದುದರಿಂದ ಈ ದುರಂತಗಳಾಗಿವೆ ಎಂದು ಹೇಳಿ ಪ್ರಕೃತಿಯ ಮೇಲೆ ಕೂಡ ಕೋಪ ಮಾಡಿ ಕೊಂಡಿದ್ದಾರೆ.

ಪ್ರಕೃತಿಯ ಮೊರೆ ಹೊಕ್ಕರೆ ಒಂದು ಪರಿಹಾರ ಸಿಕ್ಕುತ್ತದೆಂದು ನಾವು ತಿಳಿಯಬೇಕೇ ಹೊರತು ಬೇರೆ ಅಲ್ಲ. "I hope that hereafter at least Mighty Nature will be merciful to us" ಎಂದು ರೆವಿನ್ಯೂ ಮಂತ್ರಿಗಳು ಹೇಳಿರುವಂತೆ ಆಗಬೇಕು ಎಂದರೆ ನಮ್ಮ ಜನ ಸಮುದಾಯದಲ್ಲಿ ಒಂದು ಕೊರತೆ, ಲೋಪ ದೋಷಗಳು ತುಂಬಿರುವುದರಿಂದ ಈ ರೀತಿ ಪ್ರಕೃತಿಯು ವಿಕೋಪ ಬಿದ್ದಿದೆ ಎಂದರೆ ತಪ್ಪಾಗುವುದಿಲ್ಲವೆಂದು ನಾನಾದರೂ ಹೇಳುತ್ತೇನೆ. ನಮ್ಮ ರೆವೆನ್ಯೂ ಮಂತ್ರಿಗಳು ಹೇಳಿರುವಂತೆ, ನಾನು ಪ್ರಕೃತಿಯ ಬಗ್ಗೆ ಕೆಲವು ಮಾತುಗಳನ್ನಾಡುವುದು ಉಚಿತವೆಂದು ಒಂದೆರಡು ಮಾತುಗಳನ್ನಾಡುತ್ತೇನೆ. ನಮ್ಮ ಜನ ಸಮುದಾಯದಲ್ಲಿ ಏನೊಂದು ಆಗಬೇಕಾಗಿತ್ತೊ ಅಂಥ ಕೆಲಸಗಳಾಗುತ್ತ ಇಲ್ಲ ಮತ್ತು ಆಗಬಾರದ ಕೆಲಸ ಆಗುತ್ತಿರುವುದರಿಂದ ಪ್ರಕೃತಿಯೂ ಕೂಡ, ದೌರ್ಜನ್ಯವನ್ನು ತೋರಿಸುವುದಕ್ಕೆ ಕಾರಣ ಆಗಿದೆ ಎಂದರೆ ತಪ್ಪಾಗುವುದಿಲ್ಲ. ದೇಶದಲ್ಲಿ ಬಡವರು ಬಡವರಾಗಿ ಹೋಗುತ್ತಿದ್ದಾರೆ ಮತ್ತು ದಕ್ಷರು ತಮ್ಮ ಸ್ವಾರ್ಥತೆಯನ್ನು ತುಂಬಿಕೊಳ್ಳುತ್ತಿದ್ದಾರೆ. ಇದರಿಂದ ಸಮಾಜದಲ್ಲಿ ವಿಪರೀತವಾದ ಅಸಮಾನತೆ ನೆಲಸಿದೆ ದೌರ್ಜನ್ಯ ನಡೆಯುತ್ತಿದೆ. ಈ ಎಲ್ಲ ಲೋಪ ದೋಷಗಳ ಪರಿಣಾಮವಾಗಿ ಪ್ರಕೃತಿಯೂ ಕೂಡ ತುಂಬ ವಿಕೋಪವನ್ನು ಮಾಡಿಕೊಂಡರೆ ತಪ್ಪು ಎಂದು ನಾವು ಹೇಳಲಿಕ್ಕೆ ಸಾಧ್ಯವಿಲ್ಲ. ಇಂಥ ಪರಿಸ್ಥಿತಿಯಲ್ಲಿ ಪ್ರಕೃತಿಯು ಕೋಪಗೊಂಡಾಗ ಎಷ್ಟು ನಷ್ಟವಾಗುತ್ತದೆಂದು, ಏನೂ ಉಳಿಯದಂತೆ ಸಹ ಆಗುತ್ತದೆಂದು ತಿಳಿದುಕೊಳ್ಳಬೇಕು. ಜನತೆ ವಿಜ್ಞಾನದಲ್ಲಿ ಬಹಳ ಮುಂದೆ ಹೋಗಿದೆ. ಆದರೆ ಪ್ರಕೃತಿಯು ದೌರ್ಜನ್ಯದ ಹೆಡೆಯನ್ನೆತ್ತಿದಾಗ ನಾವು ಏನು ಮಾಡುವುದಕ್ಕೆ ಸಾಧ್ಯ ಎಂದು ಯೋಚನೆ ಮಾಡುವುದಾದರೆ, ಪ್ರಕೃತಿಯ ಸೌಜನ್ಯತೆಗೆ, ಸಹಾನುಭೂತಿಗೆ ನಾವು ಮರೆಹೋಗಬೇಕೇ ಹೊರತು, ಪ್ರಕೃತಿಯು ಸಹಾಯಮಾಡಬೇಕು ಎನ್ನುವ ಮನೋಭಾವನೆ ಬೆಳೆಯದೆ ಹೀಗೆ ಇಂಥ ದುರಂತಗಳು ಆಗಾಗ್ಗೆ ಆಗುತ್ತಿವೆ ಎಂದು ನಾನು ಅಭಿಪ್ರಾಯಪಡುತ್ತೇನೆ. ನಮ್ಮ ಜನಸಮುದಾಯದಲ್ಲಿ ಅಂಥ ಪರಿಸ್ಥಿತಿ ಈಗ ಉಂಟಾಗಿದೆ. ನನಗೆ ಈ ಸಂದರ್ಭದಲ್ಲಿ ಒಂದು ವಿಷಯ ಜ್ಞಾಪಕಕ್ಕೆ ಬರುತ್ತದೆ. ಶ್ರೀಮಾನ್ ಕೆ. ವಿ. ಪುಟ್ಟಪ್ಪನವರು ಸ್ವಾಮಿ ವಿವೇಕಾನಂದರ ವಿಷಯವಾಗಿ ಬರೆದಿರುವ ಪುಸ್ತಕದಲ್ಲಿ ಒಂದು ಮಾತನ್ನು ಹೇಳುತ್ತಾರೆ :

" ಗತವಿಂದಿಗೆ ಶತಮಾನಂ
ನೀನುದಯಿಸಿ, ಗುರು ದೇವ ;

ಮತಿಹೀನತೆ ಮತಕಲಹಂ
ಗತಿಸವು ಮೌಢ್ಯದ ಭಾವ !

ಬಹುದೂರದ ಬಂಗಾಳದ
ಕಲ್ಕತ್ತದಿನೀನೆಂದು

ಎನಗಿದ ತಪಕಾಂ ಧ್ಯಾನಿಹೆ
ಮೈಸೂರಲಿ ನಿಂತಿಂದು !

ನರಹೃದಯದ ಬಸಿರಕ್ತದ
ಬಾಯಾರಿಕೆ ಆರಿಲ್ಲ ;

ದಾರಿದ್ರ್ಯದ ಕರುಳಿರಿಯುವ
ಧನದಸಿಮೊನೆ ಮಾಸಿಲ್ಲ ;

ಪಲ್ಲಿರಿದಿದೆ ಕ್ರೋಧದ ಮುಖ,
ನಖವೆತ್ತಿದೆ ಕಾರ್ಪಣ್ಯ ;

ನರಳುತಿವೆ ಲೋಕದ ಸುಖ,
ಹೆಡೆಯೆತ್ತಿದೆ ದೌರ್ಜನ್ಯ !

ಜನ ಕಂಡರೆ ಜನ ಹೆದರಿದೆ ;
ಎಲ್ಲೆಲ್ಲಿಯು ಸಂದೇಹ !

ಶಾಂತಿಯ ಪರದೆಯ ಹಿಂಗಡೆ
ಕ್ರಾಂತಿಯು ರಣಸನ್ನಾಹ !

ನರನೀಚತೆ ಮಾರೀಚತೆ
ದೇಶ ಪ್ರೇಮದ ನೆವದಿ

ದಂಷ್ಟ್ರಾಶ್ರಿತ ರಾಷ್ಟ್ರಂಗಳ
ಅಸು ಹಿಂಡುತಿವೆ ಜವದಿ ! "

ಎಂದು ಅನೇಕ ಪದ್ಯಗಳನ್ನು ಶ್ರೀಮಾನ್ ಕೆ. ವಿ. ಪುಟ್ಟಪ್ಪನವರು ಬರೆದಿದ್ದಾರೆ. ಇದು ಅಕ್ಷರಶಃ ಈಗಿನ ಪರಿಸ್ಥಿತಿಗೆ ಹೊಂದಿಕೊಳ್ಳುತ್ತದೆ ಎಂದು ನನಗಾದರೂ ಅನ್ನಿಸುತ್ತದೆ. ಎಲ್ಲಿಯವರೆಗೆ ನಮ್ಮಲ್ಲಿ ಅಸಮಾನತೆ, ಈರ್ಷೆ, ಸಾರ್ವತ್ರಿಕ ಹಿತಕ್ಕಿಂತಲೂ ವೈಯುಕ್ತಿಕ ಹಿತ ಜಾಸ್ತಿ, ಎನ್ನುವಂಥ ಮನೋಭಾವನೆ, ಈ ಎಲ್ಲ ಕಾರಣಗಳಿಂದ ಈ ರೀತಿಯ ದುರಂತಗಳಾಗತೊಡಗಿವೆ ಎಂದರೆ ತಪ್ಪಾಗುವುದಿಲ್ಲ. ಶ್ರೀಮಾನ್ ಮಂಜಪ್ಪನವರೂ ಕೂಡ ಚೆನ್ನಾಗಿ ಹೇಳಿದ್ದಾರೆ.

(ಶ್ರೀ ಜಿ. ವೆಂಕಟೇಗೌಡ)

ಪ್ರಕೃತಿಯು ಮರೆಯಲ್ಲಿ ಹೋಗಬೇಕೇ ಹೊರತು ಪ್ರಕೃತಿಯ ದೌರ್ಜನ್ಯ ಹೆಡೆ ಎತ್ತುವದಕ್ಕೆ ಅವಕಾಶ ಕೊಡುವುದಾದರೆ ಯಾವ ಸಮಾನತೆಯನ್ನು ಸಾಧಿಸುವುದಕ್ಕಾಗುವುದಿಲ್ಲ. ಯಾವ ರಂಗದಲ್ಲಿ ಪ್ರಗತಿಯನ್ನು ಸಾಧಿಸಿದ್ದರೂ ಕೂಡ ದೇಶದಲ್ಲಿ ಬೆಳೆದು ಬಂದಿರುವ ಯಾವ ಧರ್ಮ ಪರಂಪರೆಯಿದೆಯೋ, ಸಂಪ್ರದಾಯ ಪರಂಪರೆಯೋ, ಸಂಸ್ಕೃತಿ ಇದೆಯೋ ಅದಕ್ಕೆ ತಿಲಾಂಜಲಿ ಯನ್ನು ಕೊಡುತ್ತಿರುವುದೇ ಇಂಥಾ ದುರಂತಗಳಿಗೆ ಕಾರಣವೆಂದರೆ ತಪ್ಪಾಗುವುದಿಲ್ಲ. ಎಲ್ಲ ರಂಗಗಳಲ್ಲಿಯೂ ಪ್ರಗತಿಯಾಗುತ್ತಿರುವ ರೀತಿಯಲ್ಲಿ ಈ ಒಂದು ದೃಷ್ಟಿಯಲ್ಲಿಯೂ ಉಳಿಸಿಕೊಳ್ಳದೆ ಹೋದರೆ, ಪುನರ್ರಚನೆ ಮಾಡಿಕೊಳ್ಳದೆ ಹೋದರೆ, ಪ್ರಕೃತಿಯು ಕೋಪಗೊಳ್ಳಲಿಕ್ಕೆ ಸಾಧ್ಯ ಮತ್ತು ಆ ಕಾರಣದಿಂದಲೇ ಈ ರೀತಿಯ ದುರಂತವಾಗಿದೆ ಎಂದರೆ ತಪ್ಪಾಗುವುದಿಲ್ಲ. ಆದುದರಿಂದ ಏನನ್ನು ಉಳಿಸಿಕೊಳ್ಳಬೇಕಾಗಿದೆಯೋ ಏನನ್ನು ರಕ್ಷಣೆ ಮಾಡಬೇಕೋ, ಅಂಥ ವ್ಯವಸ್ಥೆಯನ್ನು ನಾವು ಮಾಡಿಕೊಳ್ಳದೆಯಿದ್ದರೆ, ಇಂಥ ದುರಂತ ಆಗಾಗ್ಗೆ ಆಗುವುದರಲ್ಲಿ ಸಂದೇಹವಿಲ್ಲವೆಂದು ನಾನಾದರೂ ಹೇಳುತ್ತೇನೆ. ಇಷ್ಟನ್ನು ಹೇಳಿ, ನಾವು ಈ ವಿಚಾರದಲ್ಲಿ ಆದಷ್ಟೂ ಪ್ರಕೃತಿಯನ್ನು ಉಳಿಸಿಕೊಳ್ಳುವುದರ ಮೂಲಕ ಧರ್ಮರಕ್ಷಣೆ ಮಾಡಿಕೊಳ್ಳುವುದರ ಮೂಲಕ, ಸಾರ್ವತ್ರಿಕ ಹಿತದ ಕಡೆ ಹೆಚ್ಚಿನ ಆಸಕ್ತಿ ತೋರಿಸುವುದರ ಮೂಲಕ ಮತ್ತು ಒಂದು ಸಮಾನತೆಯನ್ನು ಉಳಿಸಿಕೊಳ್ಳುವುದರ ಮೂಲಕ ಹೆಚ್ಚುಹೆಚ್ಚು ದುರಂತಗಳಿಂದ ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯ ; ಇಲ್ಲದೇ ಹೋದರೆ ಇಷ್ಟೆಲ್ಲ ವಿಧವಾದ ಕಷ್ಟನಷ್ಟಗಳಿಗೆ ಒಳಪಡಬೇಕಾಗುತ್ತದೆ.

ಮಳೆಯ ಕಾರಣದಿಂದ, ಅತಿಪ್ರವಾಹದ ಕಾರಣದಿಂದ ಅನೇಕ ಕಡೆ ದುರಂತಗಳಾಗಿವೆ. ನನಗಾದರೂ ಕಾವೇರಿ ಮತ್ತು ಕಪಿಲಾ ನದಿಗಳ ಪ್ರವಾಹದಿಂದ ಮೈಸೂರು ಜಿಲ್ಲೆಯಲ್ಲಿ ಅಂಥ ಕೆಲವು ದುರಂತಗಳು ಮಾತ್ರ ಗೊತ್ತಿವೆ. ಅದರಲ್ಲಿಯೂ ನಮ್ಮ ತಾಲ್ಲೂಕಿನಲ್ಲಾದಂಥ ದುರಂತದ ವಿಷಯಗಳನ್ನು ಮಾತ್ರ ಅಂಕಿ ಅಂಶಗಳ ಮೂಲಕ ವಿವರಿಸಲಿಕ್ಕೆ ಸಾಧ್ಯ. ನಮ್ಮ ಮಂತ್ರಿಗಳಾದ ಶ್ರೀ ಕಡಿದಾಳ್ ಮಂಜಪ್ಪನವರು ಕೂಡ ಈ ತಿಂಗಳು 12ನೆಯ ತಾರೀಖು ಅಲ್ಲಿಗೆ ಭೇಟಿಕೊಟ್ಟು ಎಲ್ಲ ವಿಷಯಗಳನ್ನು ಖುದ್ದಾಗಿ ಪರಿಶೀಲನೆ ನಡೆಸಿದ್ದಾರೆ. ಅಲ್ಲಿ ಬೇಕಾದಷ್ಟು ಮನೆಗಳು ಹೋಗಿವೆ. ಸುಮಾರು ಆರೇಳು ಗ್ರಾಮಗಳಲ್ಲಿ ಕಾವೇರಿ ನದಿ ಸುತ್ತಿಕೊಂಡು ಊರುಗಳೆಲ್ಲ ಮುಳುಗಡೆಯಾಗಿ, ಅಲ್ಲಿಂದ ಜನ ಹೊರಗಡೆ ಬರತಕ್ಕ ಪರಿಸ್ಥಿತಿಯುಂಟಾಯಿತು. ನಾವು ಒಂದು ಸಮಿತಿ ಎಂದು ಮಾಡಿಕೊಂಡು ಆ ಜನಗಳನ್ನು ಹೊರಗಡೆ ತರಬೇಕಾದರೆ ಬಹಳ ಕಷ್ಟವಾಯಿತು. ಎರಡು-ಮೂರು ದಿನ ರಾತ್ರಿಯಲ್ಲಿ ಕೆಲಸ ಮಾಡಿದುದರ ಪರಿಣಾಮವಾಗಿ ಆ ಕೆಲಸ ಸಾಧ್ಯ ವಾಯಿತು. ನಮ್ಮ ತಾಲ್ಲೂಕಿನ ತಹಶೀಲ್ದಾರರು ನಮ್ಮ ಜೊತೆಯಲ್ಲಿ ಒಳಕ್ಕೆ ಬರಲಿಲ್ಲ. ಹೊರಗೆ ಮಾತ್ರ ಇದ್ದರು, Supervising, ಮಾಡುತ್ತಿದ್ದರೆಂದು ಹೇಳಬಹುದು. ತಹಶೀಲ್ದಾರರು ಬರಬೇಕಾಗಿತ್ತು, ಅವರು ಬರಲಿಲ್ಲವೆಂದು ನಾನು ಅಪಾದನೆ ಮಾಡುತ್ತಿಲ್ಲ, ನಾವೆಲ್ಲ ಹೋಗಿ ಜನಗಳನ್ನು ಅಲ್ಲಿಂದ ಕರೆದುಕೊಂಡು ಬರಬೇಕೆಂದು ಒತ್ತಾಯಪೂರ್ವಕವಾಗಿ ಬೇಡಿಕೆಯನ್ನು ನೀಡುತ್ತಿದ್ದರೂ ಅವರು ಒಳಕ್ಕೆ ಹೊದರೂ ಸಹ ತಹಶೀಲ್ದಾರರು ಯಾರು ಎಂದು ಜನಗಳಿಗೆ ಗೊತ್ತಿರುವುದಿಲ್ಲ ಮತ್ತು ಅವರು ಹೇಳಿದರೂ ಜನಗಳು ಹೊರಗೆ ಬರುವಂತಿಲ್ಲ. ಅವರು ಅಧಿಕಾರಿಗಳಾಗಿರುವುದರಿಂದ, ಅಧಿಕಾರಿಗಳಲ್ಲದೇಯಿರುವವರ ಪ್ರಭಾವ ನಡೆಯುತ್ತದೆಯೇ ಹೊರತು ಅಧಿಕಾರಿಗಳದು ನಡೆಯುವುದಿಲ್ಲವೆಂದು ತಿಳಿದುಕೊಂಡು ಅವರು ಬರಲಿಲ್ಲವೆಂದು ಕೊಂಡಿದ್ದೇನೆ.

ಮುಳ್ಳೂರು ಎಂಬ ಗ್ರಾಮದಲ್ಲಿ 285 ಮನೆಗಳು ಪೂರ್ಣವಾಗಿ ನಾಶವಾಗಿವೆ. 485 ಮನೆಗಳು ಉಪಯೋಗಕ್ಕೆ ಬಾರದಂತಾಗಿವೆ. 700 ಮನೆಗಳಿಗೆ damage ಆಗಿದೆ. ಒಂದು ಲಕ್ಷ ರೂಪಾಯಿಗಳಷ್ಟು ಮನೆಗಳಿಗೆ ನಷ್ಟವಾಗಿದೆ ಎಂದು ನಾವು ಅಂದಾಜು ಮಾಡಿದ್ದೇವೆ.

ಇನ್ನು ಏಂಟು ಗ್ರಾಮಗಳಲ್ಲಿ ಸುಮಾರು ಒಂದು ಸಾವಿರ ಎಕರೆ ನಾಟಿ ಹಾಕಿದ ಜಮೀನು ಪೂರ್ತಿಯಾಗಿ ಕೊಚ್ಚಿಕೊಂಡು ಹೋಗಿದೆ. ನಾಲ್ಕು ವರ್ಷಗಳ ಕಾಲ ಆ ಜಮೀನನ್ನು ಆಬಾದಿಗೆ ತರಲಿಕ್ಕೆ ಸಾಧ್ಯವಾಗುವುದಿಲ್ಲ ಎಂದು ವ್ಯವಸಾಯ ಇಲಾಖೆಯ ಜಾಯಿಂಟ್ ಡೈರೆಕ್ಟರ್ ಅವರು ದಯಮಾಡಿಸಿದ್ದಾಗ ಪರಿಶೀಲಿಸಿ ಅಭಿಪ್ರಾಯಪಟ್ಟಿದ್ದಾರೆ. ಇದಲ್ಲದೆ 1,500 ಎಕರೆ ಜಮೀನು ಅಬಾದಿಗೆ ಬಾರದೇ ಇರುವ ರೀತಿಯಲ್ಲಾಗಿದೆ. ಈ ಜಮೀನಿನಲ್ಲಿ ಸದ್ಯಕ್ಕೆ ನಾಟಿ ಹಾಕಿಲ್ಲ. ಸುಮಾರು ಮೂರು ಲಕ್ಷ ರೂಪಾಯಿ ಬೆಳೆ ನಷ್ಟವಾಗಿದೆ. ಎರೋಷನ್ ಮತ್ತು ಡಿಪಾಸಿಟ್ ಅಫ್ ಅರ್ತ್ ಮೂಲಕ ಸುಮಾರು 1,500 ಎಕರೆ ನಾಶವಾಗಿದೆ. ಇದೂ ಅಲ್ಲದೇನೆ ಶಿವನಸಮುದ್ರಕ್ಕೆ (ದ್ವೀಪ) ಹಾಕಿರತಕ್ಕಂಥ ಪುರಾತನ ಸೇತುವೆ ಪೂರ್ಣವಾಗಿ ನಾಶವಾಗಿ ಅದನ್ನು ಸರಿಪಡಿಸುವುದಕ್ಕೆ ಸುಮಾರು 50,000 ರೂಪಾಯಿ ಖರ್ಚು ಮಾಡಿದರೆ ಸಾಧ್ಯ ; ರಸ್ತೆ ಕಟ್ಟುಹೋಗಿದೆ. ವ್ಯವಸಾಯ ಮಾಡುವುದಕ್ಕೆ ಹೋಗದೆ ಇರುವ ಪರಿಸ್ಥಿತಿ ಏರ್ಪಟ್ಟಿದೆ. ಅಲ್ಲಿನ ಇನ್ನೂ ಅನೇಕ ವಿಚಾರಗಳು ಗೊತ್ತಾಗಿಲ್ಲ. ಮನೆಗಳನ್ನು ಕಳೆದುಕೊಂಡಂಥವರನ್ನು ಸುಮಾರು ಒಂದು ವಾರ ಕಾಲ ಪ್ರಾಥಮಿಕ ಶಾಲಾ ಕಟ್ಟಡಗಳಲ್ಲಿ ಇರಿಸಿಕೊಂಡಿದ್ದೆವು. ಸಾರ್ವಜನಿಕರ ಸಹಾಯದಿಂದ ಆ ಜನ ಗಳಿಗೆಲ್ಲಾ ಅನ್ನ ಆಹಾರವನ್ನು ಕೊಟ್ಟೆವು. ರೆವಿನ್ಯೂ ಮಿನಿಸ್ಟರು ಬಂದಮೇಲೆ ಅಲ್ಲಿಯವರಿಗೆ ಸುಮಾರು ಆರು ಸಾವಿರ ರೂಪಾಯಿ ರಿಲೀಫ್ ಸ್ಯಾಂಕ್ಷನ್ ಮಾಡಿದ್ದಾರೆ. ಶ್ರೀ ರಾಚಯ್ಯನವರು ಬಂದಾಗ, ಸುಮಾರು 22 ಎಕರೆ ಜಮೀನು ಇದೆ, ಅದನ್ನು ಕಂಪಲ್ಸರಿಯಾಗಿ ಅಕ್ವಯರ್ ಮಾಡಿ 400 ಮನೆಗಳಿಗೆ ಒಂದು ವ್ಯವಸ್ಥೆ ಮಾಡಲಾಗುತ್ತದೆಂದು ಹೇಳಿದರು. ಅಕ್ವಿಜಿಷನ್ ರಿಕಾರ್ಡಾಗಿ ಇದನ್ನು ಯಾವಾಗ ಕೊಡುತ್ತಾರೆಯೋ ಗೊತ್ತಿಲ್ಲ. ಕೊಳ್ಳೆಗಾಲದ ಫಿರ್ಕಾ ಮುಂದುಗಡೆ ಇರುವ 18 ಎಕರೆ ಜಮೀನಿನಲ್ಲಿ ಕೇವಲ ಮೂರು-ನಾಲ್ಕು ಗ್ರಾಮದವರನ್ನು ಮಾತ್ರ ಸೆಟಲ್ ಮಾಡುವುದಕ್ಕೆ ಸಾಧ್ಯ. ಜನಗಳು ಒಪ್ಪಲಿ, ಒಪ್ಪದಿರಲಿ, ದುರಂತ ನಡೆದ ಸ್ಥಳಕ್ಕೆ ಕಳುಹಿಸ ಬಾರದು. ಒತ್ತಾಯಪೂರ್ವಕವಾಗಿಯಾದರೂ ಸರಿಯೇ, ಅವರನ್ನು ಸುರಕ್ಷಿತವಾದ ಸ್ಥಳಗಳಲ್ಲಿ ನೆಲಸುವಂತೆ ವ್ಯವಸ್ಥೆಗೊಳಿಸಬೇಕು. ಈ ವರ್ಷವಲ್ಲದಿದ್ದರೆ, ಮುಂದಿನ ವರ್ಷ ಪ್ರವಾಹ ಬರುತ್ತದೆ. ಆದುದರಿಂದ ದುರಂತ ನಡೆಯದ ಬೇರೆ ಕಡೆ ಅವರನ್ನು ನೆಲಸುವ ವ್ಯವಸ್ಥೆ ಮಾಡ ಬೇಕು. ಪುನಃ ಆ ಸ್ಥಳಗಳಿಗೆ ಕೆಲಸಕ್ಕೆ ಹೋಗುವುದಕ್ಕೆ ಸಾಧ್ಯವಿಲ್ಲ. ಆದಷ್ಟು ಬೇಗ ಆ ಜಮೀನುಗಳನ್ನು ಅಕ್ವಯರ್ ಮಾಡಿಕೊಂಡು, ತಮ್ಮ ಕಾನೂನಿನ ಪ್ರಕಾರ ಏನನ್ನು ಕೊಡುವು ದಕ್ಕೆ ಸಾಧ್ಯವೋ ಅದನ್ನು ಕೊಟ್ಟು ಸಹಾಯಮಾಡಿದರೆ, ಮನೆಗಳನ್ನು ಕಟ್ಟುವುದಕ್ಕೆ ಸಾಧ್ಯ ವಾಗುತ್ತದೆ ತಮ್ಮ ವರದಿಯಲ್ಲಿ "Permission has also been given to the Deputy Commissiners to purchase building materials in the open market if these materials are not available in the forest department" ಎಂದು ಹೇಳಿದೆ. ಆದರೆ ಎಷ್ಟು ಮೊಬಲಗಿನ ಸಹಾಯವನ್ನು ಕೊಡಬೇಕೆಂದು ತಾವು ಹೇಳಿಲ್ಲ, up to 300 rupees ಎಂದು ಹೇಳಿದೆ. ಈಗ ಮನೆಗಳು ನಾಶವಾಗಿರತಕ್ಕಂಥವರಿಗೆ, ಇನ್ನೂ ಒಂದು ನೂರು ರೂಪಾಯಿ ಜಾಸ್ತಿಮಾಡಿದರೆ ಸರ್ಕಾರಕ್ಕೆ ತೊಂದರೆಯಾಗುವುದಿಲ್ಲ. ನೀವು ಕೊಡುವ 300 ರೂಪಾಯಿಗಳಿಂದ ಸಾಕಷ್ಟು ಸಹಾಯವಾಗುವುದಿಲ್ಲ ಏಕೆಂದರೆ 500 ರೂಪಾಯಿಗಳಿಂದ, ಹತ್ತು ಸಾವಿರ ರೂಪಾಯಿವರೆಗಿರುವ ಮನೆಗಳು ಹಾಳಾಗಿವೆ. ಹೀಗಿರುವಾಗ, ನೀವು 300 ರೂಪಾಯಿಗಳ ಮರಮುಟ್ಟು ಸಾಮಾನು ಕೊಟ್ಟರೆ ಅಂತಹ ಪರಿಸ್ಥಿತಿಯನ್ನು ಯಾವ ರೀತಿ ಸುಧಾರಿಸಬಹುದು. ಕೊನೆಯವರೆಗೆ 400 ರೂಪಾಯಿಗಳವರೆಗಾದರೂ ಹಣ ಕೊಟ್ಟು ಮನೆಗಳನ್ನು ಕಟ್ಟುವ ವ್ಯವಸ್ಥೆ ಮಾಡುವುದು ಒಳ್ಳೆಯದು ಎಂದು ನಾನು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಎಲ್ಲಿ ಫಾರೆಸ್ಟ್ ಡಿಪೋಗಳಲ್ಲಿ ಈ ಸಾಮಾನುಗಳು ಸಿಕ್ಕುವುದಿಲ್ಲವೋ, ಅಲ್ಲಿ ಮಾತ್ರ ಡೆಪ್ಯುಟಿ ಕಮೀಷನರು ಓಪನ್ ಮಾರ್ಕೆಟ್ಟಿನಲ್ಲಿ ತೆಗೆಯಬೇಕು ಎಂದು ವರದಿಯಲ್ಲಿ ಹೇಳಿದೆ. ಡೆಪ್ಯುಟಿ ಕಮೀಷನರಿಗೆ ಅಧಿಕಾರಕೊಟ್ಟರೆ, ತಾಲ್ಲೂಕು, ಹೋಬಳಿ, ಹಳ್ಳಿಗಳಲ್ಲಿ ಆಗಿರತಕ್ಕಂಥ ದುರಂತವನ್ನು ಸರಿಮಾಡಿ, ಅವುಗಳನ್ನು

(ಶ್ರೀ ಬಿ. ವೆಂಕಟೇಗೌಡ)

ಪುನರ್ವ್ಯವಸ್ಥೆ ಮಾಡುವುದು ಬಹಳ ಕಾಲಕ್ಕೂ ಆಗುವುದಿಲ್ಲ. ಕೊನೆಯಪಕ್ಷ ಆ ಅಧಿಕಾರವನ್ನು ಆಯಾ ತಾಲ್ಲೂಕಿನ ತಹಸೀಲ್‌ದಾರರಿಗೆ ಕೊಟ್ಟು, ಮರ, ಮುಟ್ಟು ಮುಂತಾದ ಸಾಮಾನುಗಳನ್ನು ಜಾಗ್ರತೆ ಜನಗಳಿಗೆ ಕೊಡಿಸುವ ಏರ್ಪಾಡು ಮಾಡಬೇಕು. ಡೆಪ್ಯೂಟಿ ಕಮಿಷನರಿಂದ ನಿಧಾನವಾಗಿ ಅಸಿಸ್ಟೆಂಟ್ ಕಮೀಷನರಿಗೆ ಬಂದು, ಅಲ್ಲಿಂದ ತಹಸೀಲುದಾರರಿಗೆ ಬರುವ ಈ ಫಾರ್ಮಾಲಿಟಿ ಬೇಡ. ಹಿಂದೆ ಮುನ್ನೂರು ರೂಪಾಯಿಗಳಿಗೆ ಸಿಕ್ಕುತ್ತಿದ್ದ ಸಾಮಾನುಗಳು ಈಗ ಅಷ್ಟಕ್ಕೇ ಸಿಕ್ಕುತ್ತಾ ಇಲ್ಲ ಆದ್ದರಿಂದ ತಹಸೀಲುದಾರರೇ 300-400 ರೂಪಾಯಿಗಳವರೆಗೆ ಸಾಮಾನುಗಳನ್ನು ಪ್ರತಿಯೊಬ್ಬರಿಗೂ ಕೊಡುವಹಾಗೆ ಅಧಿಕಾರ ಕೊಡಬೇಕು ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ನಾಲ್ಕುನೂರು ರೂಪಾಯಿಗಳ ಮೌಲ್ಯದ ಸಾಮಾನುಗಳನ್ನು ಎಲ್ಲಿ ಮನೆಕಟ್ಟಲು ಸ್ಥಳವನ್ನು ಒದಗಿಸಲಾಗುತ್ತದೆಯೋ, ಅಲ್ಲಿಯೇ ಸರ್ಕಾರ ಒದಗಿಸಿದರೆ ವಸತಿ ಸೌಕರ್ಯ ಏರ್ಪಡಿಸಿಕೊಳ್ಳುವುದಕ್ಕೆ ಸಾಧ್ಯ. ಮನೆಮಠ ಕಳೆದು ಕೊಂಡವರಿಗೆ 40 ರೂಪಾಯಿಗಳಿಂದ 100 ರೂಪಾಯಿಗಳವರೆಗೆ ರಿಲೀಫ್ ಕೊಡಬಹುದೆಂದು ಹೇಳಿದ್ದೀರಿ. ನನಗೆ ಗೊತ್ತಿರುವ ಹಾಗೆ ಕೆಲವು ಕಡೆ ಐದು ರೂಪಾಯಿಗಳನ್ನು ಕೊಟ್ಟಿದ್ದಾರೆ. ನರಸೀಪುರ ತಾಲ್ಲೂಕು ತಲಕಾಡು ಹೋಬಳಿಯಿಂದ ಮತ್ತು ಇನ್ನೂ ಕೆಲವು ಕಡೆಯಿಂದ ಆ ರೀತಿ ಸಮಾಚಾರ ಬಂದಿದೆ. 40 ರಿಂದ 100 ರೂಪಾಯಿಗಳವರೆಗೆ ಒಂದೇ ಸಮಯದಲ್ಲಿ ಕೊಡಿ ಎಷ್ಟು ಕೊಡುತ್ತೇವೆನ್ನುವುದನ್ನು ಆದಷ್ಟು ಬೇಗ ತಿಳಿಸಿ, ಒಂದೇ ಗಂಟಿನಲ್ಲಿ ಕೊಟ್ಟರೆ ಸಹಾಯವಾಗುತ್ತದೆ. ಸುಮ್ಮನೆ ಇನ್‌ಸ್ಪೆಕ್ಟರ್‌ಗಳನ್ನು ಕಳುಹಿಸಿದರೆ ಕೆಲಸ ನಡೆಯುವುದಿಲ್ಲ. ಡೆಪ್ಯುಟಿ ಕಮೀಷನರು ರಿಪೋರ್ಟ್ ತರಿಸಿಕೊಂಡು ರಿಲೀಫ್ ಹಣ ಕೊಡುವುದೆಂದರೆ ತಡವಾಗುತ್ತದೆ. ತಾಲ್ಲೂಕು ಅಧಿಕಾರಿಗಳಿಗೆ ಯಾವ ಮನೆಗೆ ಎಷ್ಟು ಪರಿಹಾರ ಕೊಡಬೇಕೆಂಬುದು ಗೊತ್ತು.

ಕೂಡಲೆ ಜಾಗವನ್ನು ಕೊಟ್ಟು ತೊಂದರೆಗೊಳಗಾದವರಿಗೆ ಮರಮುಟ್ಟು ಒದಗಿಸಿದರೆ, ಅವರು ವಸತಿ ಸೌಕರ್ಯವನ್ನು ಏರ್ಪಡಿಸಿಕೊಳ್ಳುವುದಕ್ಕೆ ಸಾಧ್ಯ ಅವರು ಅದನ್ನು ಏರ್ಪಡಿಸಿಕೊಳ್ಳುವವರೆಗೆ, 40 ರೂಪಾಯಿಗಳು ಸಾಲದು. 200 ರೂಪಾಯಿಗಳಾದರೂ ಪರವಾಗಿಲ್ಲ, ಅಷ್ಟು ಪರಿಹಾರ ಕೊಡಬೇಕು. ಅವರು ವಸತಿ ಸೌಕರ್ಯ ಏರ್ಪಡಿಸಿಕೊಳ್ಳುವವರೆಗೂ ಬೇರೆ ಯಾವ ಕೆಲಸಕ್ಕೂ ಕೈಹಾಕುವುದಕ್ಕೆ ಸಾಧ್ಯವಿಲ್ಲ. ಅಲ್ಲಿಯವರೆಗೆ ಸ್ವಲ್ಪಮಟ್ಟಿಗೆ ಹೆಚ್ಚಿನ ಪರಿಹಾರವನ್ನು ಕೊಡುವುದು ಉಚಿತ. ಅನೇಕ ಜನಗಳದು ಏನೇನು ಸಾಮಾನುಗಳು ಇದ್ದುವೋ, ಅವುಗಳೆಲ್ಲಾ ಹೋಗಿಬಿಟ್ಟಿವೆ. ಕೆಲವು ಜನ ಕೂಲಿಮಾಡುವ ಜನ ಇದ್ದಾರೆ. ಅಂಥ ಜನರಿಗೆ ಒಂದು ಹೊತ್ತಿನ ಊಟ ಸಿಕ್ಕುವ ವ್ಯವಸ್ಥೆ ಮಾಡಬೇಕು. ಎರಡು ಸಾವಿರ ಎಕರೆ ಜಮೀನು ನಾಲ್ಕು ವರ್ಷಗಳಾದರೂ ಆಬಾದಿಗೆ ಬರುವ ಸ್ಥಿತಿಯಲ್ಲಿಲ್ಲ. ಆ ಜಮೀನಿನಲ್ಲಿ ಈ ವರ್ಷ ಬೆಳೆ ಹೋಯಿತು. ಮುಂದಿನ ವರ್ಷ ಬೆಳೆ ಮಾಡುವುದಕ್ಕೆ ಸಾಧ್ಯವಿಲ್ಲ ನೀರು ಕೊರೆದು ಜಮೀನಿನಿಂದ ಮಣ್ಣನ್ನು ಎತ್ತಿಹಾಕಿದೆ. ಆ ಜಮೀನು ವ್ಯವಸಾಯಕ್ಕೆ ಯೋಗ್ಯವಾಗಬೇಕಾದರೆ ನಾಲ್ಕು-ಎಂಟು ವರ್ಷಗಳಾದರೂ ಬೇಕು. ಆ ಜಮೀನಿನವರಿಗೆ ಜಮೀನು ಇರುವ ಕಡೆ ಜಮೀನನ್ನು ಕೊಡಿಸುವ ವ್ಯವಸ್ಥೆ ಆಗಬೇಕು. ನಮ್ಮ ತಾಲ್ಲೂಕಿನಲ್ಲಿ ಕಾಡಿನ ವಿಸ್ತರಣೆ ಶೇಕಡ 66 ರಷ್ಟು ಇದೆ. ಬಹುಶಃ ಕಾರವಾರ ಮತ್ತು ನಾರ್ತ್ ಕೆನರ ಬಿಟ್ಟರೆ, ಮೈಸೂರು ದೇಶದಲ್ಲಿ ಹೆಚ್ಚಿನ ಅರಣ್ಯ ಪ್ರದೇಶವಿರುವುದು ಕೊಳ್ಳೆಗಾಲ ತಾಲ್ಲೂಕಿನಲ್ಲಿಯೇ. ಶ್ರೀ ಪಾಟೀಲರು ಅರಣ್ಯ ಮಂತ್ರಿಗಳಾಗಿದ್ದಾಗ, 10 ಸಾವಿರ ಎಕರೆ ಜಮೀನನ್ನು ಕೊಳ್ಳೆಗಾಲ ತಾಲ್ಲೂಕಿನಲ್ಲಿ ಸಾಗುವಳಿಗೆ ರಿಲೀಸ್ ಕೊಡಬಹುದೆಂದು ಈ ಸಭೆಯಲ್ಲಿಯೇ ಭರವಸೆ ಕೊಟ್ಟಿದ್ದರೂ ಇಲ್ಲಿಯವರೆಗೆ ಒಂದು ಎಕರೆಯನ್ನು ರಿಲೀಸ್ ಮಾಡಿಲ್ಲ. ಎಂತಹ ಜಮೀನನ್ನು ಕೇಳುತ್ತಾ ಇದ್ದೇವೆಂದರೆ ಹಿಂದೆ ಕಾಡಿನಲ್ಲಿ ಸೇರಿಕೊಂಡು, ಜಮೀನಿಲ್ಲದಿದ್ದವರು ವ್ಯವಸಾಯ ಮಾಡುತ್ತಿದ್ದವನು ಹಾಗೆ ವ್ಯವಸಾಯ ಮಾಡುತ್ತಿದ್ದ ರೈತರು ಬೇರೆ ಕಡೆಗೆ ಹೋದಾಗ, ಆ ಜಮೀನನ್ನು ರಿಸರ್ವ್ ಫಾರೆಸ್ಟ್‌ಗೆ ಸೇರಿಸಿಕೊಂಡು ಅದನ್ನು ಕಾಡು ಪ್ರದೇಶವೆಂದು ಮುಂದುವರಿಸಿ

ಕೊಂಡು ಬಂದಿದ್ದಾರೆ, ಅಂಥ ಜಮೀನುಗಳಿಂದ ಸರ್ಕಾರಕ್ಕೆ ಯಾವ ಉತ್ಪತ್ತಿಯೂ ಇಲ್ಲ. ಜಮೀನು ಒಳ್ಳೆಯ ಸಮನಾದ, ಲೆವೆಲ್, ಪ್ರದೇಶದಲ್ಲದೆ. ಅದಕ್ಕೆ ಎಂಟು-ಹತ್ತು ವರ್ಷ ಗೊಬ್ಬರ ಹಾಕಿಸುವ ಶ್ರಮೆಯೇ ಇಲ್ಲ. ನಮ್ಮ ತಾಲ್ಲೂಕಿನಲ್ಲಿ 10-15 ಸಾವಿರ ಎಕರೆಗಳವರೆಗೆ ಸಿಕ್ಕುತ್ತದೆ. ಈ ಆರಣ್ಯ ಪ್ರದೇಶದ ಜಮೀನಿನಿಂದ ಸರ್ಕಾರಕ್ಕೆ ಉತ್ಪತ್ತಿ ಬರುತ್ತಾ ಇಲ್ಲ. ಅಲ್ಲಿ ಬೆಲೆ ಬಾಳುವ ಮರಗಳೂ ಇಲ್ಲ. ಅಂಥ ಜಮೀನನ್ನು ರಿಲೀಸ್ ಮಾಡಿಸಿ, ಯಾರುಯಾರಿಗೆ ಭೂಮಿ ಇಲ್ಲವೋ, ಅಂಥವರಿಗೆ ಪರಿಹಾರ ರೂಪವಾಗಿ ಹಂಚುವ ಒಂದು ಸುವ್ಯವಸ್ಥಿತವಾದ ಏರ್ಪಾಡು ಮಾಡಬೇಕು. ತಕಾವಿ ಮತ್ತು ಲ್ಯಾಂಡ್ ಇಂಪ್ರೂವ್ಮೆಂಟ್ ಲೋನೆಂದು 50 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೀರಿ. ಈಗ 15 ಸಾವಿರ ರೂಪಾಯಿಗಳವರೆಗೆ ಕೊಡಿ ಎಂದು ಸರ್ಕಾರದಿಂದ ಸರ್ಕ್ಯುಲರ್ ಹೋಗಿದೆ ಯೆಂದು ಡಿವಿಜನಲ್ ಕಮೀಷನರ್ ಹೇಳಿದರು. ಈಗ ದುರಂತಕ್ಕೀಡಾಗಿರುವಂಥವರಿಗೆ, ನಿರಾಶ್ರಿತರಿಗೆ ಹಣ ಕೊಟ್ಟರೆ, 50 ಸಾವಿರ ರೂಪಾಯಿಗಳೂ ಸಹ ಸಾಲುವುದಿಲ್ಲ. ಆದುದರಿಂದ ಈ ಜಮೀನಿಲ್ಲದವರಿಗಾಗಿ ಕೂಡಲೇ ಬೇರೆ ಕಡೆಗಳಲ್ಲಿ ಜಮೀನನ್ನು ಅಕ್ವೈರು ಮಾಡಿ ಈ ಹಿಂದುಳಿದ ಜನಾಂಗಕ್ಕೆ ಯಾವ ರೀತಿಯಾದ ಸೌಲಭ್ಯವನ್ನು ಕೊಡಬೇಕೆಂದು ಹಿಂದೆ ಮಾಡಲಾಗಿತ್ತೋ ಅದಕ್ಕಿಂತ ಈಗ ಜಾಸ್ತಿಯಾಗಿ ಸೌಲಭ್ಯಗಳನ್ನು ಕಲ್ಪಿಸಿ ಕೊಡಬೇಕೆಂದು ಈ ಸಂದರ್ಭದಲ್ಲಿ ಕೇಳುತ್ತೇನೆ. Interest Free Loans ಎಂದು ಕೊಟ್ಟು ಇಷ್ಟು ವರ್ಷಗಳೊಳಗೆ ಅದನ್ನು ವಾಪಸು ಕೊಡಬೇಕೆಂದು ಕೊಟ್ಟರೆ ಇಲ್ಲಿನ ಜನಗಳಿಗೆ ಸ್ವಲ್ಪ ಸಹಾಯವನ್ನು ಕೊಟ್ಟಂತಾಗುತ್ತದೆ ಇದನ್ನು ಸರ್ಕಾರ ಕೊಡಲಿಕ್ಕೆ ಸಾಧ್ಯವಿದೆ.

†Sri KADIDAL MANJAPPA.—Sir, in order to avoid further discussion in this matter, I would like to draw the attention of the Hon'ble Members to the G.O. dated 14th March 1960, wherein it is said that interest-free loans could be paid.

I will read the relevant paragraph:

"In addition to the above short term immediate reliefs, it is considered necessary that the sufferers should also be given long term relief to enable them to rehabilitate in their former avocation. For this purpose, interest free loans upto the extent of loss sustained by the individual, not exceeding Rs. 1,000 in any individual case may be granted, the period of re-payment being fixed at ten years. Such interest-free loans shall be subject to a limit of Rs. 200 per acre in the case of wet or garden lands and Rs. 50 per acre in the case of dry lands."

Sri C. J. MUCKANNAPPA (Gubbi).—Sir, Sri Venkatai Gowda says the Executive Engineer says that he has no funds; the Chief Engineer says, he has no funds; what are you going to do?

Sri KADIDAL MANJAPPA.—If it is true, it does not apply to the emergent works; it can be taken up.

ಶ್ರೀ ಜಿ. ವೆಂಕಟೇಗೌಡ.—ಹಣವನ್ನು ಮಂಜೂರು ಮಾಡಿದರೆ, ಅಲ್ಲಿನ ಜನಕ್ಕೆ ಕೊಟ್ಟಂತಾಗಲಿಲ್ಲ. ಅಲ್ಲದೆ ತಾವು ಬಡ್ಡಿ ಇಲ್ಲದಂತೆ ಸಾಲವನ್ನು ಕೊಡುವ ವಿಚಾರವಲ್ಲಿ ಸ್ವಲ್ಪ ಬಟ್ಟಿಗೆ ಸಡಿಲವಾಗಿ ಕೊಡಬೇಕು ಎಂದು ನಾನು ಹೇಳುತ್ತೇನೆ. ಕೆಲವು ಕುಟುಂಬಗಳವರು ಮನೆಗಳನ್ನು ಕಳೆದುಕೊಂಡಿದ್ದಾರೆ. ಜಮೀನುಗಳನ್ನು ಕಳೆದುಕೊಂಡಿದ್ದಾರೆ. ಇಂತಹವರು ಸಾಲಗಳನ್ನು ತೆಗೆದುಕೊಂಡರೆ ಪೂರಿತ ಲೋನಿನಂತಾದರೂ ಕೊಡಬಹುದು. Personal Securityಯ ಮೇಲೆ ಕೊಟ್ಟರೂ ಸರ್ಕಾರಕ್ಕೆ ಬರಬೇಕಾದ ಹಣ ಈ ರೈತರಿಂದ ವಾಪಸು ಬರುತ್ತದೆ. ಇಮ್ಮ

(ಶ್ರೀ ಡಿ. ವೆಂಕಟೇಗೌಡ)

ನಮಗೆಲ್ಲರಿಗೂ ಗೊತ್ತಿದೆ. ಇಲ್ಲಿನ ಪರಿಸ್ಥಿತಿ ಹೇಗಿದೆ ಎನ್ನುವುದು ಮಾನ್ಯ ಮಂತ್ರಿಗಳಿಗೂ ಗೊತ್ತಿದೆ. Supposing it can be interpreted in two ways one in fovour of the subject and one in favour of the Government. They always interpret it in favour of the Government and not in favour of the subjects. ಅದರಿಂದಾಗಿ ಅಧಿಕಾರಿಗಳು ಧಾರಾಳವಾಗಿ ರೈತರಿಗೆ ಸಹಾಯವನ್ನು ಕೊಡುವುದಿಲ್ಲ. ನನ್ನ ಅನುಭವದಿಂದ ಇದನ್ನು ಇಲ್ಲಿ ಹೇಳುತ್ತಿದ್ದೇನೆ. ಈ ನಿರಾಶ್ರಿತ ಕುಟುಂಬಗಳಿಗೆ ಸಾಕಷ್ಟು ಪರಿಹಾರವನ್ನು ಕೂಡಲೇ ಒದಗಿಸಿಕೊಡಬೇಕು. ಅಲ್ಪ ಸೆಕ್ಯೂರಿಟಿ ಮೇಲೆ 200 ರೂಪಾಯಿಗಳ ಸಾಲವನ್ನು ಕೊಡುವಾಗ ಒಂದು ಸಾವಿರ ರೂಪಾಯಿನಷ್ಟು ಸೆಕ್ಯೂರಿಟಿ ಕೊಡಬೇಕೆಂದು ಹೇಳುತ್ತಾರೆ.

ಶ್ರೀ ಕಡಿದಾಳ್ ಮಂಜಪ್ಪ.—ತಮ್ಮ ಸಲಹೆಗಳೇನು?

ಶ್ರೀ ಡಿ. ವೆಂಕಟೇಗೌಡ.—ಪರಿಹಾರವನ್ನು ಕೊಡುವಾಗ ಸರಕಾರದವರು ಅದಷ್ಟುಮಟ್ಟಿಗೆ ಸುಲಭವಾಗಿ ಸಿಕ್ಕುವಂತೆಮಾಡಬೇಕು. ತಾವೇನೋ ಇಲ್ಲಿ ಸರಕಾರಿ ಆರ್ಡರ್ ಆಗಿದೆ ಎಂದು ಹೇಳುತ್ತೀರಿ. ಆದರೆ ಅದರಂತೆ ಕೆಲಸಗಳಾಗುವಾಗ ನಿಧಾನವಾಗುತ್ತದೆ. ನಾನು ಸಲಹೆ ಮಾಡುವುದು ವೈಯುಕ್ತಿಕವಾದ ಪರ್ಸನಲ್ ಸೆಕ್ಯೂರಿಟಿ ಎನ್ನುವ ನಂಬಿಕೆಯ ಮೇಲೆ ಈ ಜನಕ್ಕೆ ಸಾಲವನ್ನು ಕೊಡುವ ವ್ಯವಸ್ಥೆ ಮಾಡಬೇಕು.

ಶಿವನಸಮುದ್ರದ ಬಳಿ ಸೇತುವೆ ಕುಸ್ತಿ ಹಾಳಾಗಿ ಕೆಲವು ಭಾಗಗಳಲ್ಲಿ ಸಂಪರ್ಕ ಬಂದಾಗಿದೆ. ಅಲ್ಲದೆ ಅಲ್ಲಿ ವ್ಯವಸಾಯ ಮಾಡುವಂತಹ ಜಮೀನಗಳಿಗೆ ಪ್ರವಾಹದ ಮರಳು ತುಂಬಿಕೊಂಡು ಈಗ ವ್ಯವಸಾಯ ಮಾಡದ ರೀತಿಯಲ್ಲಿದೆ. ಇದನ್ನು ಸರಿಪಡಿಸಿಕೊಳ್ಳಲು ತಕ್ಕ ಮಾರ್ಗವನ್ನು ಕಲ್ಪಿಸಿ ಕೊಟ್ಟರೆ ಈ ರೈತರುಗಳು ಅವರ ಜಮೀನುಗಳವರೆಗೆ ಹೋಗಲು ಅವಕಾಶವಾಗುತ್ತದೆ. ಈ ದಾರಿಯನ್ನು ಜಾಗ್ರತೆ ರಿಪೇರಿ ಮಾಡಿಸಿಕೊಡಬೇಕು. ಈಚೆಗೆ ಮಾನ್ಯ ರೆವಿನ್ಯೂ ಮಂತ್ರಿಗಳು ಪ್ರವಾಹದ ಪರಿಸ್ಥಿತಿಯನ್ನು ನೋಡಲು ಬಂದಿದ್ದಾಗ ಸತ್ಯಾಗಾಲದ ಹತ್ತಿರ ಇರುವ ಎಡಕುರಿ ದ್ವೀಪದಲ್ಲಿ ಹಳ್ಳಿ ಜನರು ಹೇಗಿದ್ದರು ಎನ್ನುವ ಪರಿಸ್ಥಿತಿಯನ್ನು ನೋಡಿಬಂದರು. ಅಲ್ಲಿನ ನಿರ್ಗತಿಕರಾದ ಜನಕ್ಕೆ ಯಾರೋ ಒಬ್ಬರು ಮೂರು ಎಕರೆಯಷ್ಟು ತಮ್ಮ ಜಮೀನನ್ನು ಕೊಡುವುದಾಗಿ ಭರವಸೆಕೊಟ್ಟಿದ್ದಾರೆ. ಅಲ್ಲಿನ ಜನ ಗಿಡಗಳ ಮೇಲೆ, ಮರಗಳ ಮೇಲೆ ಅನ್ನಾಹಾರಗಳಿಲ್ಲದೆ ಮೂರು-ನಾಲ್ಕುದಿನ ಇದ್ದು ಕಷ್ಟಪಟ್ಟರು. ಇಂತಹ ಜನರ ಪರಿಸ್ಥಿತಿಯನ್ನು ಸುಧಾರಿಸಲು ಅವರಿಗೆ ಮನೆಗಳನ್ನು ಕಟ್ಟಿಕೊಳ್ಳಲು ಮರ ಮುಟ್ಟುಗಳನ್ನು ಕೊಡುತ್ತೇನೆಂದು ಹೇಳಿ ಬಂದು 20 ದಿನಗಳಾದರೂ ಇನ್ನೂ ಆ ಜನಕ್ಕೆ ತಲಪಿಲ್ಲ. ಅವರಿಗೆ ಮನೆಕಟ್ಟಿಕೊಳ್ಳಲು ಜಮೀನಿದೆ. ಯಾರೋ ಒಬ್ಬರು ಸ್ಥಳಕೊಟ್ಟಿದ್ದಾರೆ. ಅವರಿಗೆ ಮನೆಕಟ್ಟಿಕೊಳ್ಳಲು 300 ರೂಪಾಯಿಗಳಷ್ಟು ಬೆಲೆಬಾಳುವ ಮರಮುಟ್ಟುಗಳನ್ನು ಕೊಟ್ಟು ಸಹಾಯಮಾಡಿದರೆ ಅವರುಗಳು ಮನೆಕಟ್ಟಿಕೊಳ್ಳುತ್ತಾರೆ. ಮನೆಗಳಾದ ಮೇಲೆ ಅದಕ್ಕೆ "ಮಂಜಪ್ಪ ನಗರ" ಎಂದು ಬೇಕಾದರೂ ಕರೆದು ಶ್ರೀಮಾನ್ ಮಂಜಪ್ಪನವರಿಂದಲೇ ಆರಂಭೋತ್ಸವ ನಡೆಸಬಹುದು—(ನಗು) ಈಗಾಗಲೇ ಎಲ್ಲರಿಗೂ ತಿಳಿದಂತೆ ಹಲಸೂರಿನ ಜನರು ಪ್ರವಾಹದ ನೀರುಬಂದಾಗ ಎರಡು-ಮೂರು ದಿನಗಳ ವರೆಗೆ ಮರದಮೇಲೆ ಇದ್ದು ಅನ್ನಾಹಾರಗಳನ್ನು ಬಿಟ್ಟು ಮಕ್ಕಳು ದೊಡ್ಡವರಾದಿಯಾಗಿ ಯಾವ ರೀತಿ ಇದ್ದರು ಎನ್ನುವುದು ಮಾನ್ಯ ಮಂತ್ರಿಗಳಿಗೂ ತಿಳಿದುಬಂದಿದೆ. ಇಂತಹ ಜನಕ್ಕೆ ನಾನೂರು ಎಕರೆಯಷ್ಟು ಜಮೀನನ್ನು ಕೊಟ್ಟರೆ ಅನುಕೂಲವಾಗುತ್ತದೆ. ಶಿವನಸಮುದ್ರದಲ್ಲಿ ಒಬ್ಬ ಜಹಗೀರುದಾರರಲ್ಲಿ ಹೇರಳವಾದ ಜಮೀನಿದೆ. ಅವರಿಂದ ಪ್ರತಿ ಕುಟುಂಬಕ್ಕೂ ಐದು ಎಕರೆ ಅಥವಾ ಹತ್ತು ಎಕರೆಯಷ್ಟು ಭೂಮಿ ಬೇಕೆಂದು ಸರಕಾರದವರು ಪ್ರಯತ್ನಮಾಡಿದರೆ ಸಿಕ್ಕಬಹುದು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇದು ಬಹು ಕಷ್ಟವಾದ ಪರಿಸ್ಥಿತಿ. ಪಿ. ಡಬ್ಲ್ಯು. ಡಿ. ಇಲಾಖೆಯಿಂದ ಸ್ವಲ್ಪ ತೀವ್ರತೆಯಿಂದ

ಆಗಬೇಕಾದುದು ಅಗತ್ಯ, ಮತ್ತು ಅನಿವಾರ್ಯವಾಗಿದೆ. ಮಾನ್ಯ ಮಂತ್ರಿಗಳು ಈ ಬಗ್ಗೆ ಕೆಲಸಮಾಡಲು ಸೂಪರಿಂಟೆಂಡಿಂಟ್ ಇಂಜನಿಯರ ಮೂಲಕ Rural Communications Works and C. D. Works. ಇತ್ಯಾದಿ ಕೆಲಸಗಳನ್ನು ಆಯಾ ತಾಲ್ಲೂಕುಗಳಲ್ಲಿ ಮಾಡಬೇಕೆಂದು ಮಾಡಿದ್ದರೂ ಇನ್ನೂ ಸರಿಯಾಗಿ ಕೆಲವು ಕಡೆ ಯಾವ ವಿಧವಾದ ಕೆಲಸವೂ ಆಗಲಿಲ್ಲ. ಲೆಜಿಸ್ಲೇಷನ್ನೇನೋ ಮಾಡಿದ್ದಾರೆ. ಬೇಗ ಕೆಲಸ ಮಾಡಲು ಚೀಫ್ ಇಂಜಿನಿಯರವರು 24 ಲಕ್ಷ ಅಂದಾಜು ಆಗಬಹುದೆಂದು ಕೊಟ್ಟಿದ್ದಾರೆ. ಆದರೆ ಅದನ್ನು ಎಲ್ಲಿ ಅನುಕೂಲಗಳು ಅಗತ್ಯವಾಗಿ ಸಿಕ್ಕಲಿಲ್ಲವೋ ಅಂತಹ ಕಡೆಗಳಲ್ಲಿ ಕೊಡುವುದು ಅತಿಮುಖ್ಯ. ರೂರಲ್ ಕಮ್ಯೂನಿಕೇಷನ್ನುಗಳಿಗಾಗಿ ಒಂಬತ್ತು ಸಾವಿರ ರೂಪಾಯಿಗಳನ್ನು ಕೊಟ್ಟರೆ, ಅಲ್ಲಿಗೆ ಇನ್ನೂ ಒಂದೂವರೆ ಲಕ್ಷ ರೂಪಾಯಿಗಳಷ್ಟು ಬೇಕಾಗುತ್ತದೆ ಎಂದು ಇಂಜನೀಯರವರು ತಿಳಿಸಿದರು. ಇದರಿಂದ ಜನಗಳಿಗೆ ಇನ್ನೂ ಹೆಚ್ಚಿನ ಕೆಲಸಗಳನ್ನು ಕೊಡಲಿಕ್ಕೆ ಒಂದು ಅವಕಾಶ ಸಿಕ್ಕುತ್ತದೆ. ಆದುದರಿಂದ ಪಿ. ಡಬ್ಲ್ಯು. ಡಿ. ಇಲಾಖೆಗೆ ಸಾಕಷ್ಟು ಹಣವನ್ನು ಒದಗಿಸುವುದರ ಮೂಲಕ ಸ್ವಲ್ಪಮಟ್ಟಿಗೆ ಈ ಪರಿಸ್ಥಿತಿಯನ್ನು ಸುಧಾರಿಸಲು ಅನುಕೂಲವಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ.

ಸರ್ಕಾರದವರು ಇಷ್ಟೊಂದು ಮೊಬಲಗನ್ನು ಮಂಜೂರುಮಾಡುತ್ತಿದ್ದರೂ ಸಂಬಂಧಪಟ್ಟ ಡಿವಿಜನಲ್ ಕಮಿಷನರಿಗೂ, ಸಂಬಂಧಪಟ್ಟ ಡೆಪ್ಯುಟಿ ಕಮಿಷನರಿಗೂ ಮತ್ತು ತಹಸೀಲ್‌ದಾರರಿಗೂ ಈ ಆರ್ಡರನ್ನು ಕಳಿಸಿಲ್ಲ. ಸರ್ಕಾರೀ ಆಜ್ಞೆಯಲ್ಲಿ 50 ಲಕ್ಷ ರೂಪಾಯಿಗಳನ್ನು ಈ ಬಾಬಗೆ ಅಲಾಟ್‌ಮಾಡಿದೆ ಯೆಂಬುದಾಗಿ ಹೇಳಿದ್ದಾರೆ. ಅದು ಬಹಳ ಸಂತೋಷ. 50 ಲಕ್ಷ ಅಂಕಿಅಂಶ ನೋಡುವುದಕ್ಕೆ ಚೆನ್ನಾಗಿ ಕಾಣುತ್ತದೆ, ನಿಜ. ಆದರೆ ಅನೇಕ ಸಂದರ್ಭಗಳಲ್ಲಿ ಈರೀತಿ ಮಂಜೂರಾದ ಹಣ ಅಫೀಸರುಗಳ ವಶಕ್ಕೆ ಕೊಟ್ಟಿರುವುದಿಲ್ಲ. ಅವರು ಅದನ್ನು ತಮ್ಮ ತಮ್ಮ ಸ್ಥಳದಲ್ಲಿ ತೊಂದರೆಗೀಡಾಗಿರತಕ್ಕವರಿಗೆ ನ್ಯಾಯವಾಗಿ ಹಂಚುವುದಕ್ಕೆ ಸಾಕಷ್ಟು ಅವಕಾಶವೂ ಅವರಿಗೆ ಇರುವುದಿಲ್ಲ. ಈ ಸಂದರ್ಭದಲ್ಲಿ 20 ಲಕ್ಷವನ್ನು ಬರಿಯ ಕಮ್ಯೂನಿಕೇಷನ್ಸಿಗೇ ಕೊಟ್ಟಿದ್ದೇವೆ ಎಂಬುದಾಗಿ ಸರ್ಕಾರೀ ಆರ್ಡರ್‌ರನ್ನು ಬೇರೆ ಹೊರಡಿಸಿದ್ದೀರಿ ಆ ಸರ್ಕಾರಿ ಆರ್ಡರ್ ಪ್ರಕಾರ ಡಿವಿಜನಲ್ ಕಮಿಷನರ್ ಮತ್ತು ಡೆಪ್ಯುಟಿ ಕಮಿಷನರಿಗೆ ಈ ಹಣವನ್ನು ತಮ್ಮ ಅವಶ್ಯಕತೆಗನುಗುಣವಾಗಿ ಪ್ರತಿಯೊಂದು ಜಿಲ್ಲೆಯಲ್ಲೂ ಹಂಚಬೇಕು ಮತ್ತು ತಹಸೀಲ್‌ದಾರರಿಗೂ ಈ ಕೆಲಸವನ್ನು ಕೊಡಬೇಕು. ಅದು ಆಗದಿದ್ದ ಪಕ್ಷದಲ್ಲಿ ಪ್ರತಿಯೊಂದು ಜಿಲ್ಲೆಯಲ್ಲಿರತಕ್ಕ ಪ್ರದೇಶಕಾಂಗ್ರೆಸ್ ಕಮಿಟಿಯ ಮೂಲಕವಾದರೂ ಆ ಹಣ ಪ್ರವಾಹಪೀಡಿತರಾದಂತಹವರ ಕೈಮುಟ್ಟುವ ಹಾಗೆ ಅತಿಜಾಗ್ರತೆಯಾಗಿ ಹಂಚುವ ವ್ಯವಸ್ಥೆಯನ್ನು ಮಾಡಬೇಕು. ಆ ಹಣ ಪ್ರತಿಯೊಂದು ಸ್ಟೇಜಿನಲ್ಲಿಯೂ ಒಂದೊಂದು ಆಫೀಸಿನಲ್ಲಿ ಯಾವುದೋ ಕಾರಣಾಂತರಗಳಿಂದ ನಿಲ್ಲುವುದಕ್ಕೆ ಅವಕಾಶಕೊಡದೆ ಜಾಗ್ರತೆಯಾಗಿ ಸರ್ಕಾರದವರು ಮಂಜೂರುಮಾಡಿದ ಈ ಹಣ ನಿಷ್ಪ್ರಯೋಜನ ಮತ್ತು ದುರುಪಯೋಗವಾಗದಂತೆ ನೋಡಿಕೊಳ್ಳಬೇಕು.

ಶ್ರೀ ಕಡಿದಾಳ್ ಮಂಜಪ್ಪ.—ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿಯೇ ಇದುವರೆಗೂ ಈಗಾಗಲೇ ತಾಲ್ಲೂಕ್‌ವೈಜ್, ಡಿಸ್ಟ್ರಿಕ್‌ವೈಜ್ ಹಣವನ್ನು ಹಂಚಲು ವ್ಯವಸ್ಥೆಮಾಡಿದೇವೆ. 50 ಲಕ್ಷ ರೂಪಾಯಿಗಳನ್ನು ಹಂಚಲು ಷುರು ಆಗಿದೆ. ಕೆಲವು ದಿನಗಳ ಹಿಂದೆಯೇ ಈ ರೀತಿ ಹಂಚಬೇಕೆಂದು ಎಲ್ಲಾ ಡಿವಿಜನಲ್ ಕಮಿಷನರಿಗೂ, ಡೆಪ್ಯುಟಿಕಮೀಷನರಿಗೂ ಸೂಕ್ತ ಸಲಹೆಗಳನ್ನೂ, ಸೂಚನೆಗಳನ್ನೂ ಕೊಟ್ಟಿದೆ. ಮಾನ್ಯಸದಸ್ಯರಾದ ಶ್ರೀಮಾನ್ ವೆಂಕಟೇಗೌಡರು ಇರತಕ್ಕ ಕ್ಷೇತ್ರವಾದ ಕೊಳ್ಳೇಗಾಲ ತಾಲ್ಲೂಕಿಗೆ ನಾಲ್ಕು ಸಾವಿರ ರೂಪಾಯಿಗಳನ್ನು ಸಾಲವಾಗಿ ಕೊಟ್ಟಿದ್ದೇವೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ನಂಜನಗೂಡಿಗೆ ಕೇವಲ ಮೂರು ಸಾವಿರ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದೀರಿ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ದೇಶದಲ್ಲಿ ಜನಗಳು ಸತ್ತುಹೋದಮೇಲೆ ನೀವು ದುಡ್ಡು ಇಟ್ಟುಕೊಂಡು ಏನು ಮಾಡುತ್ತೀರಾ ? ಜನಗಳು ಎಲ್ಲೆಲ್ಲಾ ಸಾಯುತ್ತಿದ್ದಾರೆ. ಜಾಗ್ರತೆಯಾಗಿ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಅವರಿಗೆ ಸಾಕಷ್ಟು ಹಣವನ್ನೊದಗಿಸಿ ಎಂದು ನಾವು ಹೇಳಿದರೆ ನೀವು ಇನ್ನೂ ಬೇಕಾದರೆ ಹಣ ಒದಗಿಸುತ್ತೇವೆ; ವರದಿಗಳು ಬರುತ್ತಿವೆ, ನೋಡೋಣ ಎಂದು ಹೇಳುತ್ತಿದ್ದೀರಲ್ಲಾ! ಈ ರೀತಿಯಾದ ಸರ್ಕಾರದ ವರ್ತನೆ ಖಂಡಿತವಾಗಿ ಸರಿಯಲ್ಲ.

Sri G. VENKATAI GOWDA.—The Divisional Commissioner will ask the Deputy Commissioner as to how much money he needs. In turn the Deputy Commissioner will ask the Tahsildar.

Sri KADIDAL MANJAPPA.—All that will be done by telephone.

Sri G. VENKATAI GOWDA.—Red-tapism is still there. It still takes about a month.

Sri KADIDAL MANJAPPA.—It is not so. The amount has been allotted.

Sri G. VENKATAI GOWDA.—What is the amount allotted, Sir, How much money has been spent there?

Sri C. J. MUCKANNAPPA.—Sir, the Government should suspend all other work and go to the rescue of these people. Do not except reports to reach you.

ಶ್ರೀ ಜಿ. ವೆಂಕಟೇಗೌಡ.—ನಾನು ಹೇಳಿದ ಪ್ರಕಾರ ನಾಳೆಯ ದಿವಸವೋ ಇವತ್ತೋ ಫೋನ್ ಮಾಡಿ ನೀವು ಚೀಫ್ ಇಂಜಿನಿಯರಿಗೆ ಮೂರು ಲಕ್ಷ ರೂಪಾಯಿಗಳನ್ನು ಒದಗಿಸುವುದಾದರೆ ಅಲ್ಲಿಗೆ ಸ್ವಲ್ಪ ರಿಲೀಫ್ ಸಿಕ್ಕಬಹುದು. ಪಿ. ಡಬ್ಲ್ಯು. ಡಿ. ಯವರಿಗೆ ಕೆಲಸ ಮಾಡಲೂ ಉತ್ಸಾಹ ಬರುತ್ತದೆ.

Sri KADIDAL MANJAPPA.—I appreciate the services rendered by the public of Kollegal. I have said that in Chikmagalur. Within a fortnight, you will see that at least a portion of the money allotted is spent.

ಶ್ರೀ ಜಿ. ವೆಂಕಟೇಗೌಡ.—ಏಕೆಂದರೆ ಯಾವತ್ತೂ ಕೆಲಸ ಮಾಡುವುದಕ್ಕೆ ದುಡ್ಡು ಅಲಾಟ್‌ಮೆಂಟ್ ಇಲ್ಲವೆಂದು ಆ ಇಲಾಖೆಯ ಅಧಿಕಾರಿಗಳು ಹೇಳುತ್ತಾರೆ. ಅದಕ್ಕೋಸ್ಕರವಾಗಿ ಅವರಿಗೆ ಜಾಗ್ರತೆಯಾಗಿ ಸಾಕಷ್ಟು ಹಣವನ್ನು ಕೊಡಿಸಿ. ನಾನೇ ಖುದ್ದು ಹೋಗಿ ಅಲ್ಲಿನ ಎಗ್ಸಿಕ್ಯೂಟಿವ್ ಇಂಜಿನಿಯರ್ ಮತ್ತು ಚೀಫ್ ಇಂಜಿನಿಯರನ್ನೋ ಕಂಡು ಇಲ್ಲಿ ಅಲ್ಲಿ ಇಂತಿಂಥ ಕೆಲಸಗಳಾಗಲಿಲ್ಲ, ಕಾರಣವೇನೆಂದರೆ, ಅವರು ತಮ್ಮ ಹತ್ತಿರ ಇನ್ನೂ ಹಣ ಅಲಾಟಾಗಿ ಬಂದಿಲ್ಲ, ರೂರಲ್ ಕಮ್ಯೂನಿಕೇಷನ್ನಿಗೆ ರೆಸ್ಟೊರೇಷನ್ ಆಫ್ ಟ್ಯಾಂಕಿಗೆ ಅಲಾಟ್‌ಮೆಂಟ್ ಬಂದಿಲ್ಲ. ಅದನ್ನು ಕೊಡಿಸಿಕೊಡಿ, ಕೊಡಲಿ ನಾವು ಕೆಲಸಗಳನ್ನು ಪ್ರಾರಂಭಿಸಿ ಮುಗಿಸುತ್ತೇವೆ ಎಂದು ಹೇಳುತ್ತಾರೆ. ಈಗಾಗಲೇ ನನ್ನ ತಾಲ್ಲೂಕಿನಲ್ಲಿ ಅನೇಕ ದೊಡ್ಡ ದೊಡ್ಡ ಕೆರೆಗಳು ಒಡೆದು ಹೋಗಿವೆ. ಇದರಿಂದ ರೈತರಿಗೆ ಬಹಳ ತೊಂದರೆಯಾಗಿದೆ. ಅಲ್ಲಿನ ಒಂದೊಂದು ಕೆರೆಯ ರೆಸ್ಟೊರೇಷನ್ ಮಾಡಬೇಕಾದರೆ ಸುಮಾರು 50 ಸಾವಿರ ರೂಪಾಯಿಗಳವರೆಗೂ ಬೇಕಾಗುತ್ತವೆ. ಅಂದ ಮೇಲೆ ಈಗ ಸರ್ಕಾರ ಮಂಜೂರು ಮಾಡಿರುವ ಕೇವಲ 100 ರೂಪಾಯಿಗಳಿಂದ ಇಂಥ ಕೆಲಸಗಳು ಆಗುವ ಬಗೆ ಹೇಗೆ? ರೂರಲ್ ಕಮ್ಯೂನಿಕೇಷನ್‌ಗಳನ್ನು ಹಾಕಬೇಕಾದರೆ ಅದಕ್ಕೆಷ್ಟು ಹಣಬೇಕು? ನಿರಾಶ್ರಿತರಾದವರಿಗೆ ಅದಷ್ಟು ಎಲ್ಲ ಸೌಕರ್ಯಗಳನ್ನು ಕಲ್ಪಿಸಿಕೊಡುವುದಕ್ಕೆ ಸಾಕಷ್ಟು ಹಣವನ್ನು ಕೊಡಬೇಕು. ಅದಕ್ಕಾಗಿ ಬೇಕಾದ ಹಣವನ್ನು ಬಡ್ಜೆಟ್ಟಿನಲ್ಲಿ ಮುಂದಾಲೋಚನೆಯಿಂದಲೇ ಅಲಾಟ್ ಮಾಡಿಸಬೇಕು. ಇರಿಗೇಷನ್ ಅಂಡ್ ರೋಡ್ ರಿಪೇರ್ಸ್ ರೆಗ್ಯುಲರ್ ಹೈವೇಸ್ ಇತ್ಯಾದಿ ಬಾಬುಗಳಲ್ಲಿ ಬ್ಲಾಕ್‌ಟಾಪ್ ಮಾಡುವುದಕ್ಕೆ ದುಡ್ಡು ಇದೆ ಎಂದು ಹೇಳಿಕೊಂಡು ದುರುಪಯೋಗ ಮಾಡುವುದೂ ಉಂಟು. ಅದರೆ ಇದರಿಂದ ನಿರಾಶ್ರಿತರಾದವರಿಗೆ ಯಾವ ರೀತಿಯಲ್ಲೂ ಸಹಾಯವಾಗುವುದಿಲ್ಲವೆಂಬ ದೃಷ್ಟಿಯಿಂದ ಈ

ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಒಟ್ಟಿನಲ್ಲಿ 40 ರೂಪಾಯಿಗಳಿಂದ 100ರೂಪಾಯಿಗಳವರೆಗೆ ನಗದು ಪರಿಹಾರವನ್ನು ಪ್ರವಾಹ ಪೀಡಿತ ಜನಗಳಿಗೆ ಕೊಡುವ ಕ್ರಮವನ್ನು ಜಾಗ್ರತೆಯಾಗಿ ಸರ್ಕಾರದವರು ಕೈಗೊಳ್ಳಬೇಕೆಂದು ನಾನು ಹೇಳುತ್ತೇನೆ. ಏಕೆಂದರೆ ಕೆಲವು ಕಡೆ ನೀರಿನ ಪ್ರವಾಹ ಹೆಚ್ಚುತ್ತಿವೆ ಮತ್ತೆ ಕೆಲವು ಕಡೆ ನೀರಿನ ಪ್ರವಾಹ ಇಳಿಮುಖವಾಗುತ್ತಿದೆ. ಆದಕಾರಣ ಅವರಿಗೆ ಪರಿಹಾರ ಧನವನ್ನು ಬೇಗನೆ ಕೊಡಬೇಕು. ತಹಸೀಲ್ದಾರರಿಗೆ ಮಾತ್ರ ಯಾರಯಾರ ಕುಟುಂಬಗಳವರಿಗೆ ಈ ಬಗ್ಗೆ ತೊಂದರೆಯಾಗಿದೆ ಎಂಬುದು ಚೆನ್ನಾಗಿ ಗೊತ್ತಿದೆ. ಅಂತಹವರಿಗೆ ಬಹು ಜಾಗ್ರತೆಯಾಗಿ ಸಹಾಯವನ್ನು ನೀಡಬೇಕು.

Sri KADIDAL MANJAPPA.—There I wanted to submit that the Hon'ble Member is asking P. W. D. to sanction the money for rural communication and not for repairing bridges or damages. That is a different matter. So far as repairs to damages are concerned, Government have issued instructions, that without waiting for sanction and without considering the amount involved, they must go ahead with the work.

ಶ್ರೀ ಜಿ. ವೆಂಕಟೇಗೌಡ.—ಜಮೀನು ಕಳೆದುಕೊಂಡಿರುವವರಿಗೆ ಮರ ಮುಟ್ಟುಗಳನ್ನು ಜಾಗ್ರತೆಯಾಗಿ ಒದಗಿಸಿಕೊಡಬೇಕು. ಸರ್ಕಾರಕ್ಕೆ ಮೊದಲಿನಿಂದಲೂ ಯಾವ ರೀತಿಯಲ್ಲೂ ಆದಾಯವನ್ನು ಕೊಡದೇ ಇರತಕ್ಕ ಕೆಲವು ಪ್ರದೇಶಗಳಿವೆ. ಅಂತಹ ಪ್ರದೇಶಗಳನ್ನು ವ್ಯವಸಾಯಕ್ಕೆ ಯೋಗ್ಯವಾಗುವ ರೀತಿಯಲ್ಲಿ ಆ ಜಮೀನುಗಳನ್ನು ಆಬಾದುಮಾಡಿ ರೈತರಿಗೆ ಅದರಲ್ಲೂ ಪ್ರವಾಹ ಪೀಡಿತರಿಗೆ ಸಾಗುವಳಿಗಾಗಿ ಕೊಡುವ ನೀತಿಯನ್ನು ಸರ್ಕಾರದವರು ಹಾಕಿಕೊಂಡು ಅದನ್ನು ಒಪ್ಪಿಕೊಳ್ಳಬೇಕು. ಏಕೆಂದರೆ ಸರಾಸರಿ ಶೇಕಡ 18ರಷ್ಟು ಕಾಡು ನಮ್ಮಲ್ಲಿದೆ. ಒಟ್ಟಿನಲ್ಲಿ ಶೇಕಡ 66ರಷ್ಟು ಭಾಗವೇ ಕಾಡುಭೂಮಿ ನಮ್ಮಲ್ಲಿದೆಯೆಂದು ಹೇಳಬಹುದು. ಅದು ಹೇಗೆ ಬಂತು ಎಂದು ಈ ಸಂದರ್ಭದಲ್ಲಿ ಯೋಚನೆ ಮಾಡಬೇಕು. ನಮ್ಮ ಕಡೆ ಒಂದು ಅನ್ನಂಬಟ್ಟಿ ಗ್ರಾಮ ಎಂದು ಇದೆ. ಆ ಗ್ರಾಮದಲ್ಲಿ ಮೂರು ಸಾವಿರ ಎಕರೆ ಜಮೀನು ಇದೆ. ವರ್ಷಾನುಗಟ್ಟಲೆಯಿಂದ ಆ ಭೂಮಿಯನ್ನು ರಿಜರ್ವ್ ಮಾಡಿ ಇಟ್ಟಿರುವುದರಿಂದ ಇದುವರೆಗೂ ರೈತರು ಅಲ್ಲಿ ಕಲ್ಟಿವೇಟ್ ಮಾಡುತ್ತಿಲ್ಲ.

Sri KADIDAL MANJAPPA.—I will see that within a fortnight this gratuitous relief is distributed.

ಶ್ರೀ ಜಿ. ವೆಂಕಟೇಗೌಡ.—ಆದುದರಿಂದ ಅರಣ್ಯ ಇಲಾಖೆಯವರು ತಮ್ಮ ಇಲಾಖೆಗೆ ಸೇರಿದ ಯಾವಯಾವ ಜಮೀನುಗಳಿಂದ ಯಾವ ರೀತಿಯಾದ ಉತ್ಪತ್ತಿಯೂ ದೊರೆಯುತ್ತಿಲ್ಲವೋ ಅಂತಹ ಭಾಗಗಳನ್ನು ಕೂಡಲೇ ವಶಪಡಿಸಿಕೊಂಡು ರೆವಿನ್ಯೂ ಇಲಾಖೆಯವರಿಗೆ ಈ ಬಗ್ಗೆ ವ್ಯವಹಾರ ನಡೆಸಿ ಆ ಜಮೀನುಗಳನ್ನೆಲ್ಲಾ ಈ ಪ್ರವಾಹಗಳಿಂದ ನೊಂದಿರತಕ್ಕವರಿಗೆ ಹಂಚುವುದರ ಮೂಲಕ ಅವರೆಲ್ಲರ ಕಷ್ಟಪರಿಸ್ಥಿತಿಯನ್ನು ಸುಧಾರಿಸುವುದಕ್ಕೆ ಸಾಧ್ಯವೆಂದು ನಾನು ಹೇಳಬಯಸುತ್ತೇನೆ. ಒಟ್ಟಿನಲ್ಲಿ ಬಹುತ್ವರಿತವಾದ ಕಾರ್ಯ ಕ್ರಮಗಳನ್ನು ಸರ್ಕಾರದವರು ಈ ಸಂದರ್ಭದಲ್ಲಿ ಕೈಕೊಳ್ಳುವುದು ಉಚಿತವಾದ್ದು ಮತ್ತು ಸಾಧುವಾದುದು. ಪ್ರಕೃತಿ ಶಮನವಾಗುವುದಕ್ಕೆ ತಕ್ಕ ವ್ಯವಸ್ಥೆಗಳನ್ನೂ ಸರ್ಕಾರದವರು ಕೈಗೊಳ್ಳಬೇಕು. ಎಲ್ಲಾ ದೇವಸ್ಥಾನಗಳಲ್ಲಿ ಪೂಜೆ, ಪುರಸ್ಕಾರಗಳನ್ನು ಮಾಡುವ ಹಾಗೆ ಏರ್ಪಾಡು ಮಾಡಬೇಕು.

ಶ್ರೀ ಕಡಿದಾಳ್ ಮಂಜಪ್ಪ.—ಹೋದಸಾರಿ ಆ ರೀತಿ ಪೂಜೆ ಮಾಡಿಸಿದ್ದರಿಂದ ಅನೇಕ ಸದಸ್ಯರು ನನ್ನನ್ನು ಹಾಸ್ಯ ಮಾಡಿದರು. ಆದುದರಿಂದ ಈ ಸಾರಿ ಆ ರೀತಿ ಮಾಡಲಿಲ್ಲ.

ಶ್ರೀ ಜಿ. ವೆಂಕಟೇಗೌಡ.—ಆ ರೀತಿ ಈಗಲೂ ಯೋಚನೆ ಮಾಡಿದರೆ ಚೆನ್ನಾಗಿತ್ತು, ಹಳೆಯ ಸಂಪ್ರದಾಯವನ್ನು ಬಿಡಬಾರದಾಗಿತ್ತು. ಯೋಚನೆಮಾಡಿ. ಮೈಸೂರು ಸಂಸ್ಥಾನದ ಸಂಸ್ಕೃತಿಯ ವಿಷಯವನ್ನು ತಾವು ಹಾಗೆ ತಿಳಿಯಬಾರದು.

ಶ್ರೀ ಬಿ. ಎಕ್. ಬೋರಣ್ಣಗೌಡ.—ದೇವಸ್ಥಾನದ ಅರ್ಚಕರಿಗೆ ಸುಖವಾಗಿ ಒಂದು ದಿವಸ ಭೋಜನವಾಗುತ್ತದೆ.

ಶ್ರೀ ಜಿ. ವೆಂಕಟೇಗೌಡ.—ಈ ಕೆಲಸಗಳನ್ನು ನಿರ್ವಹಿಸಲು ತಮಗೆ ದೇವ ರು ಸರ್ವ ಶಕ್ತಿಯನ್ನು ಕೊಡಲಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Mr. DEPUTY SPEAKER.—The House will now adjourn and meet to-morrow at 1 P.M.

The House adjourned at Six of the Clock to meet again at One of the Clock on Thursday, the 27th July 1961.

THE
MYSORE LEGISLATIVE ASSEMBLY
DEBATES

OFFICIAL REPORT
OF THE
PROCEEDINGS OF THE FIFTY-FIFTH DAY
OF THE
ELEVENTH SESSION

THURSDAY, 27th JULY 1961.

Vol. XI—No. 55

BANGALORE:
PRINTED BY THE DIRECTOR OF PRINTING, STATIONERY AND
PUBLICATIONS AT THE GOVERNMENT PRESS
1967

PRICE: 25 Paise

CONTENTS

		Pages
Papers laid on the Table:		3719
Mysore Live-Stock Improvement Bill, 1960; Mysore Public Conveyance Bill, 1960; Mysore Ancient and Historical Monuments and Archaeological Sites and Remains Bill, 1960; Mysore Warehouses Bill, 1960; Mysore Pawnbrokers' Bill, 1961	As passed by Legislative Council	
Motion *re*: Flood Situation in the State—(Debate not concluded)	...	3719—3768